ವಿತ್ತೀಯ ಕಾರ್ಯಕಲಾಪಗಳು

1996-97 ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ.

+ ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ) :- ಮಾನ್ಯ ಉಪಾಧ್ಯಕ್ಷರೇ, ಸುದ್ದಿವದಿಂದ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿ ಇದ್ದಾರೆ. ಈ ದಿವಸ 19 ಡಿಮ್ಯಾಂಡ್‌ಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ. 'ವಾಲ್ಟರ್ ಬುಲಿಹಾರ್ಟ್' ಅವರು ಇಂಗ್ಲೀಷ್ ಕಾನ್ಸ್ಟಿಟ್ಯೂಷನ್ ಬರೆಯುತ್ತಾ ಒಂದು ಮಾತನ್ನು ಹೇಳಿದ್ದಾರೆ, ಅವರು ಏನು ಹೇಳಿದ್ದಾರೆಂದರೆ :-

`` The Cabinet Government educates the nation. The presidential does not educate it and may corrupt it. It has been said that English invented the phrase `` Her Majesty's Opposition." Tht it was the first Government which made a criticism of administration as much as a part of the quality as administration itself. This critical opposition is the consequence of Cabinet Government. The great scene of debates, the geat engine of popular instructions and political controversies is the Legisltive Assembly. A speech thereby by an eminent stateman, a Party movement by a great Political combination are the best means yet known for arouding enlivening and teaching the people. The Cabinet system ensures such debate for it makes them the means by which statesmen advertise themselves for future and confirm themselves in the present Government. It brings forward men eager to speak and gives them occasions to speak" ನಾನು ಇದನ್ನು ಏಕೆ ಹೇಳಿದೆ ಎಂದರೆ, ಇಲ್ಲಿ ಇವತ್ತು 19 ಡಿಮ್ಯಾಂಡ್ಸ್ ಇವೆ. ನನಗೆ ಗೊತ್ತಿರುವ ಹಾಗೆ ನಾನು 1967 ರಲ್ಲಿ ಸದಸ್ಯನಾಗಿದ್ದಾಗ 19 ಡಿಮ್ಯಾಂಡ್‌ಗಳ ಬಗ್ಗೆ ಮಾತನಾಡಲು ಕನಿಷ್ಟಪಕ್ಷ 50-60 ಗಂಟೆಗಳ ಸಮಯವನ್ನಾದರೂ ನಾನು ತೆಗೆದುಕೊಂಡಿದ್ದೇನೆ. ಆದರೆ, ಇವತ್ತು ಫೈನಾನ್ಸ್ ಬಿಸ್‌ನೆಸ್‌ಗೆ ಅರ್ಥವೇ ಇಲ್ಲದ ಹಾಗೆ ಆಗಿದೆ. ಡಿಮ್ಯಾಂಡ್ ಬಗ್ಗೆ ಚರ್ಚೆಯಾಗಿ ಮಂತ್ರಿಗಳು ಡಿಮ್ಯಾಂಡ್ ಮೇಲೆ ಉತ್ತರ ಕೊಟ್ಟಿದ್ದಿದ್ದರೆ ಅವರ ಕೆಪಾಸಿಟಿ ನಮಗೆ ಅರ್ಥವಾಗುತ್ತಿತ್ತು. ಈ ಹಿಂದೆ ಸದಸ್ಯರುಗಳು ಸಹಾ ಮಂತ್ರಿಗಳಷ್ಟೇ ಪ್ರಬಲವಾಗಿ ಮಾತನಾಡುತ್ತಿದ್ದರು. ಇವತ್ತಿನ ಸಿಸ್ಟಮ್‌ನಲ್ಲಿ ಯಾರನ್ನೇ ಒಬ್ಬರನ್ನು ದೂರುವ ಹಾಗಿಲ್ಲ. ಎಲ್ಲಾ ರಾಜಕೀಯ ಪಕ್ಷಗಳ ಕಥೆ ಈ ತರಹನೇ ಆಗುತ್ತಿದೆ. ಈ ಹಿಂದೆ, ಮಂತ್ರಿಗಳಿಗೆ, ಶಾಸಕರುಗಳಿಗೆ ಮತ್ತು ಪುರಸಭೆ ಅಧ್ಯಕ್ಷರಾದ ಮೇಲೆಯೂ ಟ್ರೈನಿಂಗ್ ಕೊಡಲಾಗುತ್ತಿತ್ತು. ಈಗ ಆ ತರಹ ಟ್ರೈನಿಂಗ್ ಕೊಡುವ ವ್ಯವಸ್ಥೆ ಇಲ್ಲ. ಈ ಸದನಲ್ಲಿ ಬಂದಿರತಕ್ಕಂಥ ಹೊಸ ಸದಸ್ಯರುಗಳಿಗೆ ಪ್ರತಿ ದಿನ ಒಬ್ಬೊಬ್ಬರು ಒಂದೊಂದು ಡಿಮ್ಯಾಂಡ್‌ನ್ನು ಇನಿಷಿಯೇಟ್ ಮಾಡಿ ಎಂದಾದರೂ ಟ್ರೈನಿಂಗ್ ಕೊಡಬೇಕು. ಆದರೆ,

ಈ ಎಲ್ಲಾ ವ್ಯವಸ್ಥೆಯಿಂದ ನಾವು ವಂಚಿರಾಗಿದ್ದೇವೆಂದು ಹೇಳುವುದು ಅನಿವಾರ್ಯವಾಗಿದೆ. ಡಿಮ್ಯಾಂಡ್ಸ್‌ನಲ್ಲಿ ಸ್ಟೇಟ್ ಲೆಜಿಸ್ಲೇಚರ್, ಜನರಲ್ ಅಡ್ಮಿನಿಸ್ಟ್ರೇಷನ್ ಸೆಕ್ರೆಟರಿಯೇಟ್, ಮಿನಿಸ್ಟರ್ ಇವೆಲ್ಲಾ ಇದೆ. ಮಾನ್ಯ ಮುಖ್ಯ ಮಂತ್ರಿಗಳಾದ ಜೆ. ಹೆಚ್. ಪಟೇಲ್ ರವರು ಬಹಳ ಬುದ್ಧಿವಂತರು. ಏನೇ ವಿಚಾರವಾಗಲೀ ಯಾವುದೇ ಫೋರಂನಲ್ಲಾಗಲೀ, ಅದು ನ್ಯಾಷನಲ್ ಡೆವೆಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್ ಇರಬಹುದು, ಮತ್ತೊಂದು ಇರಬಹುದು ಅಲ್ಲಿ ವಿಷಯಗಳನ್ನು ಚೆನ್ನಾಗಿ ಮಂಡಿಸತಕ್ಕಂಥ ಸಾಮರ್ಥ್ಯ ಅವರಿಗೆ ಇದೆ. ಇನ್ನೊಮ್ಮೆ ಅದೇ ತರಹ ಸೆಂಟಿನ್ಸ್‌ನ್ನು ನಾನು ಈಗ ಕ್ವೋಟ್ ಮಾಡುತ್ತೇನೆ.

All men need great results and a change of Government is a great result. It has a hundred ramifications. It runs through Society. It gives hope to many and it takes away hopes from many. ನಿಮ್ಮ ಸರ್ಕಾರ ಚೇಂಜ್ ಆಯಿತೇ. It has taken away hopes from all. ನನ್ನ ಲೆಕ್ಕದಲ್ಲಿ It has not given hope to any. ಇದರಲ್ಲಿ ಬಹುಶಃ ನಿಮ್ಮ ಶಾಸಕರಲ್ಲಿ ಕೆಲವರಿಗೆ ಹೋಪ್ಸ್ ಇದ್ದರೂ ಇರಬಹುದು. ಮಂತ್ರಿಗಳಾಗುತ್ತೇವೆಂಬ ಆಸೆ ಅವರಲ್ಲಿರಬಹುದು. ತಾವು ಈಗ 45 ಜನರನ್ನು ಮಂತ್ರಿಗಳನ್ನಾಗಿ ಮಾಡುವಾಗ ಶ್ರೀಮತಿ ಲಲಿತಾ ನಾಯಕ್ ರವರನ್ನು ಕೈಬಿಟ್ಟಿದ್ದೀರಿ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಅಂದರೆ, ಆ ಸಮಾಜದ ಒಬ್ಬ ಹೆಣ್ಣುಮಗಳು ಈ ಹಂತಕ್ಕೆ ಬರುತ್ತಾರೆ ಅಂದರೆ, ಅವರಿಗೆ ನೀವು ಪ್ರಾತಿನಿಧ್ಯ ಕೊಡುವುದಿಲ್ಲ ಅಂದರೆ ಇದು ಮೆಚ್ಚತಕ್ಕಂಥ ಕಾರ್ಯವಲ್ಲ. ಅದರಲ್ಲಿಯೂ ಮಾನ್ಯ ಜೆ. ಹೆಚ್. ಪಟೇರವರ ಕಾಲದಲ್ಲಿ ಹೀಗಾಗುತ್ತದೆಂದು ನಾನು ನಿರೀಕ್ಷೆ ಮಾಡುವುದಿಲ್ಲ. ಮಂತ್ರಿಮಂಡಲವನ್ನು ನೀವು ಯಾವ ಲೆಕ್ಕದಲ್ಲಿ ಮಾಡಿದ್ದೀರಿ ಎಂಬುದೇ ನನಗೆ ಇನ್ನೂ ಅರ್ಥವಾಗಿಲ್ಲ. ಹಿಂದೆ ಮಂತ್ರಿಗಳನ್ನು ಮಾಡುವಾಗ ಆಯಾಯ ಜಿಲ್ಲೆಯವರನ್ನು ನೋಡುತ್ತಿದ್ದರು. ಇಂಥ ವ್ಯಕ್ತಿಯು ಜಿಲ್ಲೆಯಲ್ಲಿ ಪ್ರಮುಖನೇ? ಇವ ನಿಗೇನಾದರೂ ಪ್ರಾಮುಖ್ಯತೆ ಇದೆಯೋ? ಈತನು ಮುಖಂಡನೇ? ಒಂದು ಜನಾಂಗ ದಲ್ಲಾದರೂ ಈತನು ಪ್ರಮುಖನೇ? ಇವನದ್ದು ಇಂಪ್ಯಾಕ್ಟ್ ಆಗುತ್ತದೋ? ಇತ್ಯಾದಿ ಗಳನ್ನು ವಿಚಾರ ಮಾಡುತ್ತಿದ್ದರು. ಈಗ ನಿಮ್ಮಲ್ಲಿ ಲಿಂಗಾಯುತರು 38 ಜನರು, ಒಕ್ಕಲಿಗರು 32 ಜನರು, ಷೆಡ್ಯುಲ್ಡ್ ಕಾಸ್ಟ್‌ನವರು 25, ಬ್ರಾಹ್ಮಣರು 2, ಬ್ಯಾಕ್ ವರ್ಡ್‌ನವರು 14, ಮುಸ್ಲಿಮ್ಸ್ 3, ಇನ್ನೂ ಬೇರೆಯವರು 2- ಹೀಗೆ ಇದ್ದಾರೆ. ಇದು ನಾನು ತಿಳಿದುಕೊಂಡ ಹಾಗೆ. ಇನ್ನು ಯಾವ ವ್ಯತ್ಯಾಸ ಇದೆಯೋ ಗೊತ್ತಿಲ್ಲ. ಹೀಗಾಗಿ ಜಿಲ್ಲಾವಾರು ಪ್ರಾತಿನಿಧ್ಯವೂ ಸರಿಯಾಗಿ ಆಗುತ್ತಾ ಇಲ್ಲ. ಆ ಮಂತ್ರಿಗಳು ಏನೇನು ಎಂಬುದೇ ನಮಗೆ ಇದೂವರೆಗೂ ಅರ್ಥವಾಗಿಲ್ಲ. ಹಾಗೆಯೇ ಅರ್ಥ ಮಾಡಿಸಿಕೊ ಡುವುದಕ್ಕೆ ನೀವು ಪ್ರಯತ್ನ ಪಟ್ಟಿಲ್ಲ. ಯಾವುದೇ ಜಿಲ್ಲೆಯಾಲ್ಲಾಗಲೀ ಮುಖಂಡತ್ವವನ್ನು ಬೆಳೆಸಬೇಕು. ಇದರಿಂದ ಪಕ್ಷಕ್ಕಷ್ಟೇ ಲಾಭ ಅಲ್ಲ, ಜನರಿಗೂ ಮುಖಂಡನೊಬ್ಬ ಬೆಳೆದರೆ ಲಾಭವಾಗುತ್ತದೆ. ಆ ಪ್ರದೇಶಕ್ಕೂ ಲಾಭವಾಗುತ್ತದೆ. ಹೀಗೆ ಮುಖಂಡತ್ವವನ್ನು ಬೆಳೆಸತಕ್ಕಂಥ ಕಾರ್ಯವನ್ನು ಮಾಡಬೇಕು. ಅಂಥ ಪ್ರಾಮುಖ್ಯವಾಗಿರುವವರಿಗೆ ಪ್ರಾತಿನಿಧ್ಯವನ್ನು ಕೊಡಬೇಕು. ಒಂದು ಮಾತು ನಿಜ. ಇಂದಿರಾಜಿಯವರ ಕಾಲದಲ್ಲಿ,

ಆರಸುರವರ ಕಾಲದಲ್ಲಿ ಒಂದು ರೀತಿಯಲ್ಲಿ ಮುಖಂಡತ್ವವನ್ನು ಕೊಲ್ಲತಕ್ಕಂಥ ಕಾರ್ಯ ಪ್ರಾರಂಭವಾಯಿತು. ಜನಗಳಿಗೆ ಹತ್ತಿರವಾಗಿರತಕ್ಕಂಥ ಮುಖಂಡರನ್ನು ತೆಗೆಯತಕ್ಕಂಥ ಕಾರ್ಯ ಪ್ರಾರಂಭವಾಯಿತು. ಈಗ ನೀವು ಕೂಡ ಅದನ್ನೇ ಅನುಸರಿಸಿದ ಹಾಗೆ ಕಾಣುತ್ತದೆ. ನಿಮ್ಮ ಕಷ್ಟವೂ ನನಗೆ ಅರ್ಥವಾಗುತ್ತದೆ. ಏಕೆಂದರೆ ನೀವು ಎಷ್ಟು ಜನರನ್ನು ಈಗ ಸಂತೋಷಪಡಿಸಬೇಕು? ನಾನು ನಿಮ್ಮ ಸರಕಾರವನ್ನೂ ಕೂಡ ಕೊಯಲೇಶನ್ ಗವರ್ನ್‌ಮೆಂಟ್ ಎಂದೇ ಕರೆಯುವುದು. ನಿಮ್ಮಲ್ಲಿಯೂ ಹೆಗ್ಡೆಯವರ ಒಂದು ಪಕ್ಷ ಇದೆ, ದೇವೇಗೌಡರವರ ಒಂದು ಪಕ್ಷ ಇದೆ, ಜೆ. ಹೆಚ್. ಪಟೇಲ್ ರವರದ್ದೇ ಒಂದು ಗುಂಪು ಇದೆ. ಆದುದರಿಂದ ಇದು ಒಂದು ತರಹದಲ್ಲಿ ಕೊಯಲೇಶನ್ ಗವರ್ನ್‌ಮೆಂಟ್ ರೀತಿಯಲ್ಲಿ ಇದೆ. ಒಬ್ಬ ಆರ್ಥರ್ ಬರೆದಿರುವ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. Arthur Beradale Keth ಅವರು ಏನು ಬರೆಯುತ್ತಾರೆ ಅಂದರೆ:

"Ministers may differ on minor issues without serious disavantage and accept majority decisions there on with propriety but a Ministry made up of men without common principle held together by little more than a desire for office would speedily lap over and cohesion" ಇನ್ನೊಂದು ಕಡೆ ಮಂತ್ರಿಮಂಡಲದ ಬಗ್ಗೆ ಬರೆಯುತ್ತಾ The Ministry was one of many talents but their minds work in very different ways. ಎಂದಿದ್ದಾರೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಅಂದರೆ, ಸರಕಾರವು ಪ್ರಬಲವಾಗಬೇಕಾದರೆ ನಿಮ್ಮ ಸರಕಾರದ್ದು ಇಂಪ್ಯಾಕ್ಟ್ ಆಗಬೇಕು. ಇಂಪ್ಯಾಕ್ಟ್ ಆಗಬೇಕಾದರೆ ನೀವು ಸ್ಟ್ರಾಂಗ್ ಆಗಬೇಕು. ಮುಖ್ಯಮಂತ್ರಿ ಆದವರು ಸ್ಟ್ರಾಂಗ್ ಆಗಿರಬೇಕು ಮತ್ತು ನಿಮ್ಮ ಟೀಮು ಕೂಡ ಯುನೈಟೆಡ್ ಆಗಿರಬೇಕು. ಎಲ್ಲರ ಮನಸ್ಸು ಒಂದೇ ತರಹ ಹೋಗುವ ಹಾಗೆ ಇರಬೇಕು. ಆದರೆ ನಿಮ್ಮಲ್ಲಿ ಅದು ಯಾವುದೂ ಇಲ್ಲ. ಕೆಲವೊಂದು ಪತ್ರಿಕಾ ಸುದ್ದಿಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. "ಸಮಸ್ಯೆ ಪರಿಹಾರಕ್ಕಾಗಿ ಜನರ ಬಳಿ ಹೋಗುವೆ" - ಇದನ್ನು ನಾನು ಹೇಳಿದ್ದಲ್ಲ. ಯಾರು ಹೇಳಿದರು? "ಈಗ ನಡೆಯುತ್ತಿರುವ ಶಾಸಕರ ಸಹಿ ಸಂಗ್ರಹಣೆ ಕೇಂದ್ರದ ದೇವೇಗೌಡರ ಸರಕಾರವನ್ನು ಬಲಪಡಿಸುವ ಉದ್ದೇಶದಿಂದ ಕೂಡಿದ್ದರೆ ನಾನು ಸಂಪೂರ್ಣವಾಗಿ ಅವರ ಜೊತೆಗೆ ಇದ್ದೇನೆ. ಒಂದು ವೇಳೆ ನನ್ನ ಸರಕಾರವನ್ನು ದುರ್ಬಲಗೊಳಿಸುವುದು ಸಹಿ ಸಂಗ್ರಹಣೆಯ ಉದ್ದೇಶವಾಗಿದ್ದರೆ ನಾನು ಈ ಸವಾಲನ್ನು ಸ್ವೀಕರಿಸುತ್ತೇನೆ. ನಾನು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ದಿನದಿಂದ ರಾಜಕೀಯ ಬೆಳವಣಿಗೆಯಿಂದಾಗಿ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗದ ಪರಿಸ್ಥಿತಿಯು ಇದೆ" ಈ ಮಾತನ್ನು ಇವರೇ ಒಪ್ಪಿಕೊಳ್ಳುತ್ತಾರೆ. ಬುಧವಾರ ಬೆಳಿಗ್ಗೆ 9 ಗಂಟೆಗೆ ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ಕುಳಿತಿದ್ದ ಮುಖ್ಯಮಂತ್ರಿ ಜಯದೇವಪ್ಪ ಹಾಲಪ್ಪ ಪಟೇಲ್ ಸ್ವಲ್ಪ ವಿನ್ನರಾದಂತಿದ್ದರು. ಇದಾದ ಮೇಲೆ ಇನ್ನೊಂದು ಮಾತು ಹೇಳಿದ್ದೀರಿ, "ಬ್ಲಾಕ್‌ಮೇಲ್ ತಂತ್ರಕ್ಕೆ ಮಣಿಯುವುದಿಲ್ಲ" ಈ ಮಾತನ್ನು ಯಾರನ್ನು ಕುರಿತು ಹೇಳಿದ್ದೀರಿ? ಅದು ಯಾರನ್ನು ಕುರಿತು ಎಂದು ನಮಗೆ ಅರ್ಥವಾಗಿದೆ. ಆದರೆ ಈ ವಿದ್ಯಮಾನಗಳು ನಡೆಯುತ್ತಾ ಇದ್ದರೆ ಜನಗಳ ಮೇಲೆ ನಿಮ್ಮ ಸರಕಾರ ಹೇಗೆ ಇಂಪ್ಯಾಕ್ಟ್ ಆಗುತ್ತದೆ? ಅಂದರೆ ನೀವು

ವೀಕ್ ಎಂದು ಆಗುತ್ತದೆ. ದಿನಬೆಳಗಾದರೆ ತನ್ನ ಕುರ್ಚಿ ಅಲಗಾಡುತ್ತದೆಂಬ ಯೋಚನೆಯು ಮುಖ್ಯಮಂತ್ರಿಗಿದ್ದರೆ ಸರಕಾರದಲ್ಲಿರತಕ್ಕಂಥವರಿಗೆ ನಮ್ಮ ಸರಕಾರ ಯಾವಾಗ ಯಾವಾಗ ಬಿದ್ದು ಹೋಗುತ್ತದೋ ಎಂಬ ಭಯ ಇದ್ದರೆ.....

SRI H. SHIVAPPA :- It is your presumption ಎಂದು ಕಾಣಿಸುತ್ತದೆ.

ಶ್ರೀ ಹೆಚ್. ಎನ್. ನಂಜೇಗೌಡ :- ಇದು ನನ್ನ ಸ್ಟೇಟ್‌ಮೆಂಟ್ ಅಲ್ಲ. ಅದು ಜೆ. ಹೆಚ್. ಪಟೇಲ್‌ರ ಸ್ಟೇಟ್‌ಮೆಂಟ್. ಪರಿಸ್ಥಿತಿ ಈ ತರಹದಲ್ಲಿದೆ. ಇಷ್ಟೆಲ್ಲಾ ಇದ್ದರೂ ಕೂಡ ನಿಮಗೆ ಸಪೋರ್ಟ್ ಕೊಡುತ್ತಾರೆ. ಅಡಕ್ಕೆ ಸರ್ ಐವರ್‌ಜೆನ್ನಿಂಗ್ಸ್ ಒಂದು ಮಾತನ್ನು ಹೇಳುತ್ತಾರೆ. Self interest dictates support even when reasons oppose. ಸಕಾರಣವಾಗಿ ವಿರೋಧ ಮಾಡಬೇಕೆಂದ್ದಿರೂ ಕೂಡ Self-interest, deictation ಕೊಡುತ್ತದಂತೆ ನೀವು ಸರಕಾರಕ್ಕೆ ಸಪೋರ್ಟ್ ಮಾಡಿ ಎಂದು. ಏಕೆ? More over to vote against the Government is to vote with the enemy. ಇದು ಒಂದು.

1.10 ಪಿ. ಎಂ.

"To assist in defeating the government is to restrict the coming into office of the oppostion."ಎಲೆಕ್ಷನ್ ಆದರೆ ಎಲ್ಲಿ ಅಧಿಕಾರ ಹೋಗುತ್ತದೋ ಎಂದು. a result which is ex-hypothesy worse than keeping the government in office". ಅಂದರೆ ಅಧಿಕಾರ ಕಳೆದುಕೊಳ್ಳುವುದಕ್ಕಿಂತ ಯಾರೋ ಇದ್ದಕೊಂಡು ಹೋಗಲಪ್ಪ ಹೇಗೋ ಎಂದು. ನಮ್ಮ ಕಡೆ ಒಂದು ಗಾದೆ ಹೇಳುತ್ತಾರೆ; ಯಾರೂ ಇಲ್ಲದಿದ್ದರೆ ಮುದಿ ಬೋರೇಗೌಡ ಆದರೂ ಪರವಾಗಿಲ್ಲ ಗಂಡ ಅಂತ ಒಬ್ಬರಲಿ ಎಂದು. ಹಾಗೆ ನಿಮ್ಮ ಪಾರ್ಟಿಯಲ್ಲಿ ಏನಾಗಿದೆ ಎಂದರೆ ಇಷ್ಟವಿರಲಿ ಇರದಿರಲಿ ಸಪೋರ್ಟ್ ಕೊಟ್ಟುಕೊಂಡು ಹೋಗುತ್ತಿದ್ದಾರೆ, ಇಲ್ಲಿ ಜನಜನಿತವಾಗಿದೆ, ಆಡಳಿತ ಪಕ್ಷದಲ್ಲಿ ಒಮ್ಮತವಿಲ್ಲ, ಒಮ್ಮತವಿದ್ದರೆ 45 ಮಂತ್ರಿಗಳನ್ನು ಮಾಡಬೇಕಾಗಿರಲಿಲ್ಲ ಇವತ್ತಿನ ಪರಿಸ್ಥಿತಿಯಲ್ಲಿ ನೀವಿನ್ನೂ 10 ಜನ ಮಾಡದಿದ್ದರೂ ಒಮ್ಮತ ಬರುವುದಿಲ್ಲ, ಇದರಲ್ಲಿ ಬಂದಿದೆ. ಇದು ಗಜಗಾತ್ರದ ಸಂಪುಟ ದೊಡ್ಡ ಸಂಪುಟ ತಂದಿರುವ ದೊಡ್ಡ ಸಮಸ್ಯ, ಮಂತ್ರಿಗಳಿಗೆ ಸೌಲಭ್ಯ ಅಧಿಕಾರಿಗಳಿಗೆ ತಲೆನೋವು, ಹೀಗೆಲ್ಲ ಬರೀತಾರೆ. ನಾನು ಏಕೆ ಹೇಳುತ್ತೇನೆಂದರೆ ಇದು visible burden on the state exchequer. ಜನಕ್ಕೆ ಗೊತ್ತಾಗುತ್ತದೆ ಮಂತ್ರಿಗಳಾಗಿಬಿಟ್ಟರಲ್ಲಪ್ಪ ಏನು 30 ಜನ ಇದ್ದರು 45 ಆದರು, ಆಡಳಿತ ಸುಧಾರಣಾ ಆಯೋಗದಂತೆ ಮಂತ್ರಿ ಸಂಖ್ಯೆ ಕಡಿಮೆ ಇಡುವುದು ಸೂಕ್ತ, ಆದರೆ that is why it has become visible burden on the state exchequer. ಇದು ಒಂದು ಕಡೆಯಾಯಿತು, ನಾನು ಸ್ಥೂಲವಾಗಿ ಮಾತನಾಡಿ ಹೋಗುತ್ತೇನೆ. ಇದರ ಜೊತೆಗೆ unnoticeable burden on the state exchequer. ಯಾವುದು ಎಂದರೆ ಒಬ್ಬ ಮಂತ್ರಿಯಾದರೆ ಎಷ್ಟು ದಿನ ಇರುತ್ತಾರೆ, ಕಷ್ಟಪಟ್ಟರೆ 5 ವರ್ಷ ಇರಬಹುದು,

ಅದೃಷ್ಟ ಚೆನ್ನಾಗಿದ್ದರೆ ಜ್ಯೋತಿಬಸು ಅಂಥವರು ಅಪಾರ ವರ್ಷ ಇರಬಹುದು, ಅದೃಷ್ಟಹೀನರಾದರೆ 15 ದಿವಸದಲ್ಲಿ ಹೋಗಬಹುದು ಮಂತ್ರಿಗಳಿಗೆ ಖರ್ಚಾಗುವ ಬರ್ಡನ್ ಏನಿದೆ ಇದು ಟಿಂಪರರಿ. ಆದರೆ ಸರ್ಕಾರಿ ನೌಕರಿ ಹುದ್ದೆ ಕ್ರಿಯೆಟ್ ಮಾಡಿದರೆ? unnoticeable burden, ಅದು ಜನರಿಗೆ ಗೊತ್ತಾಗುವುದಿಲ್ಲ, ಎಷ್ಟು ಹುದ್ದೆಗಳು ಕ್ರಿಯೆಟಾಯಿತು ಎಂದು. ಒಂದು ಹುದ್ದೆ ಕ್ರಿಯೆಟಾದರೆ ಅವ ರಿಟೈರಾಗುವ ತನಕ ಬರ್ಡನ್ ರಿಟೈರಾದ ಮೇಲೆ ಪೆನ್‌ಶನ್, ಅವನು ಸಾಯುವವರೆಗೂ ಬರ್ಡನ್ ಸ್ಟೇಟ್ ಎಕ್ಸ್‌ಚಕರ್‌ಗೆ. ಅಧಿಕಾರಿಗಳ ಬಗ್ಗೆ ಮೂರು ವಿಧ ಇದೆ. ನಾನು ಅಡ್ಮಿನಿಸ್ಟ್ರೇಶನ್ ಬಗ್ಗೆ ಇವತ್ತು ಸ್ವಲ್ಪ ಹೆಚ್ಚಿಗೆ ಮಾತಾಡ ಬೇಕೆಂದಿದ್ದೇನೆ. ಏಕೆಂದರೆ ರೇಷನ್ ಕಾರ್ಡ್ ಎಲ್ಲಿಂದ ಎಲ್ಲಿಗೆ ಹೋದರೂ ಸುಲಭವಾಗಿ ಸಿಗುವಂತಿಲ್ಲ. ಖಾತೆ ಆಗಬೇಕಾದರೂ ಎಲ್ಲಿಂದೆಲ್ಲಿಗೆ ಹೋದರೂ ಅರ್ಜೆಂಟ್ ಸಿಕ್ಕುವಂತಿಲ್ಲ, ಗೊತ್ತಾಯಿತೆ. ವ್ಯವಸ್ಥೆ ಎಷ್ಟು ಹದಗೆಟ್ಟಿದೆ ಅಂದರೆ ನಾನಿಲ್ಲಿ ಹೇಳಬಾರದು ಆದರೂ ಹೇಳುತ್ತೇನೆ. ಮಾನ್ಯ ನಾಣಯ್ಯನವರು ನಿನ್ನೆ ಒಂದು ಮಾತು ಹೇಳಿದರು, ರಿಸಿಟ್ ಮತ್ತು ಡಿಸ್‌ಪ್ಯಾಚ್ ಸೆಕ್ಷನ್ ಇರುತ್ತದಲ್ಲ ಅಲ್ಲಿಗೆ ಬಂದು ಮುಖ್ಯಕಾರ್ಯದರ್ಶಿಗೆ ತಲುಪಬೇಕಾದರೆ 8-10 ದಿವಸ ಹಿಡಿಯುತ್ತದಂತೆ. ಅವರು ಲಾ ಸೆಕ್ರೆಟರಿಗೆ ಮಾರ್ಕ್ ಮಾಡಿದರೆ ಅಲ್ಲಿಗೆ ಹೋಗಲು ಪುನಃ 8 ದಿವಸ ಹಿಡಿಯುತ್ತದಂತೆ. ಏನು ರೈಲಲ್ಲಿ ಹೋಗುತ್ತದೋ, ನ್ಯೂಯಾರ್ಕಿಗೆ ಹೋಗಬೇಕೋ? ವಿಧಾನ ಸೌಧದಲ್ಲಿ ಒಂದು ರೂಮಿನಿಂದ ಇನ್ನೊಂದು ರೂಮಿಗೆ ಹೋಗಬೇಕಾದರೆ ಇಷ್ಟೊಂದು ಕಾಲ ತೆಗೆದುಕೊಳ್ಳುತ್ತದೆಯೆಂದು ಅವರು ಹೇಳುತ್ತಿದ್ದರು. ಇದನ್ನು ಮರೆಯುವ ಮುಂದೆ ಒಂದು ಮಾತು ಹೇಳುತ್ತೇನೆ: ನೀವು ಖಚಿತವಾಗಿ ಎಂ.ಎಲ್.ಎ ಮತ್ತು ಅಧಿಕಾರಿಗಳ ಸಂಬಂಧ ಹೇಗಿರಬೇಕೆಂದು ಹೇಳಿ. ಹಿಂದೆ ಎಂ.ಎಲ್.ಎ.ಸ್ ಬಂದರೆ ಎದ್ದು ರಿಸೀವ್ ಮಾಡಬೇಕೆಂದು ಸರ್ಕುಲರ್ ಇತ್ತು, ನಾನು ಹೊಸದಾಗಿ ಎಂಎಲ್‌ಎ ಆದಾಗ ಒಬ್ಬ ಚೀಫ್ ಇಂಜಿನಿಯರನ್ನು ನೋಡುವುದಕ್ಕೆ ಹೋಗಿದ್ದೆ. ಈಗ ಬಿಡಿಓ ಸೆಕ್ರೆಟರಿ, ಎಂಎಲ್‌ಎ ಅಧ್ಯಕ್ಷ, ಎಂಎಲ್‌ಎ ಕರೆದರೆ ನಾನು ಅವರನ್ನು ನೋಡುವುದಿಲ್ಲ ಅಂತಾರೆ ಬಿಡಿ. ನಮ್ಮ ಬಸವರಾಜ್‌ಗೆ, ಉದಾಹರಣೆ 20 ಅಂಶಗಳ ಕಾರ್ಯಕ್ರಮದ ಕಮಿಟಿಗೆ ಅಧ್ಯಕ್ಷ ಎಂಎಲ್‌ಎ, ಮೀಟಿಂಗ್ ಫಿಕ್ಸ್ ಮಾಡಬೇಕಾದರೆ ಅದಕ್ಕೂ ಬರುವುದಿಲ್ಲ ಅವ, ಯಾರ ಕೈಲೊ ಕೊಟ್ಟು ಕಳಿಸುತ್ತಾನೆ. ನಿಮ್ಮ ಕಾಲದಲ್ಲಾದರೂ ಆಗಲಿ, ಆಟ್‌ಲೀಸ್ಟ್ ಎಂಎಲ್‌ಎಗಳಿಗೂ ಅಧಿಕಾರಿಗಳಿಗೂ ಸಂಬಂಧ ಹೀಗಿರಬೇಕೆಂದು ಕ್ಲಿಯರಾಗಿ ಇರಲಿ. let there be a direction from the government. ಹೊಸದಾಗಿ ಕ್ಲಿಯರಾಗಿ ಮೆನ್‌ಶನ್ ಮಾಡಿ. ನಾನು ಕೇಳುತ್ತಿದ್ದೆ, ನಾನು ಹೊಸದಾಗಿ ಎಂಎಲ್‌ಎ ಆದಾಗ ಒಬ್ಬ ಜಿಲ್ಲಾಧಿಕಾರಿ ಇದ್ದರು ಅವರ ಹೆಸರು ಹೇಳುವುದು ಬೇಡ ನಾನು ಅವರ ಹೆಸರು ಹಿಡಿದು ಕರೆಯುತ್ತಿದ್ದೆ, ಆಗ ವಯಸ್ಸು ಚಿಕ್ಕದು ನನಗೆ, ಹೆಸರು ಹಿಡಿದು ಕರೀತಾರಲ್ಲ ಅಂತ ಅವರು ಯಾರ ಹತ್ತರವೋ ದುಃಖ ತೋಡಿಕೊಂಡು ಕೂತರೆ ಮಂತ್ರಿಯಾದ ಮೇಲೆ ನನ್ನ ಗತಿಯೇನು? ಆದ್ದರಿಂದ ಪ್ರಜಾಸತ್ತೆಯಲ್ಲಿ, ಅಧಿಕಾರಿಗಳು ನೌಕರರು ಚುನಾಯಿತ ಪ್ರತಿನಿಧಿಗಳು ಅವರು ಉತ್ಕೃಷ್ಟ ಎಂಬುದು parliamentary system of democracy ನಲ್ಲಿ ಅರಿತುಕೊಳ್ಳಬೇಕಾಗುತ್ತದೆ ಅಧಿಕಾರಿಗಳು. ಇಲ್ಲದಿದ್ದರೆ ಸರ್ಕಾರ ನಡೆಸುವ ಮಂತ್ರಿಗಳು ಅರಿತುಕೊಳ್ಳುವಂತೆ ಮಾಡಬೇಕು. ಮೊನ್ನೆ

ನಮ್ಮ ಬಸವರಾಜು ಸಚಿವರಿಗೆ ದೂರು ಕೊಟ್ಟಿದ್ದಾರೆ ಅವರು ಸಂಬಂಧಿತ ಇಲಾಖೆ ಕಾರ್ಯದರ್ಶಿಯನ್ನು ಕರೆಸಿದರೆ ಎಂಎಲ್‌ಎ ಕರೆದರೆ ಬಿಡಿಒ ಹೋಗಬೇಕೂಂತ ಎಲ್ಲೂ ಕಾನೂನಿನಲ್ಲಿಲ್ಲ ಎಂದು ಹೇಳಿದಂತೆ ಈಗ ಸಿಂಧ್ಯ ಅವರು ಮಂತ್ರಿ, ಇವರು ಕರೆದರೆ ಸಾರಿಗೆ ಕಾರ್ಯದರ್ಶಿ ಬರಬೇಕೆಂದು ಕಾನೂನು ಮಾಡಿದ್ದೇವೆಯೇ? ಹೇಗಿದೆ ಸಮಾಚಾರ. ಆ ಅಧಿಕಾರಿಗಳಿಗೆ ಮೀಸೆ ಬರುವುದಿಲ್ಲವೆ, ಹಲ್ಲು ಬರುವುದಿಲ್ಲವೆ, ಆದ್ದರಿಂದ ಇದನ್ನು ನೀವು ಸ್ವಲ್ಪ ತಿದ್ದಿಕೊಳ್ಳಬೇಕಾಗುತ್ತದೆ. ಅಧಿಕಾರಿಗಳ ಪೈಕಿ 3 ವಿಧ, ಯಾವುವು ಎಂದರೆ ಎಫಿಷಿಯಂಟ್, ನಾರ್ಮಲ್, ಇನೆಫಿಸಿಯೆಂಟ್ ಎಫಿಸಿಯೆಂಟ್ ಅಂದರೆ ಯಾರು? ಅವರು ಡಿಸಿಶನ್ ತಗೊಬಾರದು, ತಗೊಂಡರೂ 6 ತಿಂಗಳು ಆಗಬೇಕು ಕೆಲಸವೇ ಮಾಡದೇ ಹೋದರೆ ಅವರು ಎಫಿಸಿಯೆಂಟ್, ನಾವು ಕೊಡೊ ಟೈಟಲ್ಸ್ ಅವು. ನಾವೂ ನೋಡುತ್ತಿದ್ದೇವೆ ಬಹಳ ವರ್ಷಗಳಿಂದ ಒಂದೊಂದು ಕಾಲದಲ್ಲಿ ಒಂದೊಂದು ಕಾಕಸ್, ಈ ಐಎಎಸ್ ಅಧಿಕಾರಿಗಳದು. 4-5 ಜನ ಇವರೇ ದುಷ್ಟ ಕೂಡ ಸೇರಿದಂತೆ ಇವರೇ ಮ್ಯಾನೇಜ್ ಮಾಡುವುದು, ಇವರ ಪ್ರಕಾರ ಕೆಲಸ ಮಾಡದಿರುವವರು ಮೋಸ್ಟ್ ಎಫಿಶಿಯೆಂಟ್, ಆನೆಸ್ಟ್‌ಆಗಿ ರೊಟಿನ್‌ಆಗಿ ಕೆಲಸ ಮಾಡಿಕೊಂಡು ಹೋಗುವವರು ನಾರ್ಮಲ್ಸ್, ಸ್ವಲ್ಪ ಆಸಕ್ತಿವಹಿಸಿ ಓಡಾಡಿಕೊಂಡು ಸಾಮಾನ್ಯ ಜನರಿಗೆ ಸ್ಪಂದಿಸಿ ಕೆಲಸ ಮಾಡುತ್ತಾನೆ ಅಂದರೆ ಅವನು ಇನೆಫಿಸಿಯೆಂಟ್ ಕರಪ್ಟ್, ನಮಗೆ ಬಂದಿರುವಂತಹ ಸ್ಥಿತಿಯನ್ನು ನಾನು ಹೇಳುವುದು ಇನ್ನು unnoticeable burden on the state exchequer ಗೆ ಬರುತ್ತೇನೆ. ಎಲ್ಲ ಕೇಡರ್‌ಗೂ ನಾನು ಹೋಗುವುದಿಲ್ಲ. ನಾನು 67 ನೇ ಇಸವಿಯಲ್ಲಿ ಶಾಸಕನಾದೆ, ದಿವಂಗತ ಎಸ್. ಎಂ. ಚನ್ನಬಸಪ್ಪನವರು ನನ್ನ ಗುರುಗಳು, ಅವರು ಆಗ ಲೆಕ್ಕ ಇಟ್ಟುಕೊಳ್ಳುತ್ತಿದ್ದರು, ಆ ಹಳೆ ನೋಟ್ಸ್ ಹೇಗೋ ಸಿಕ್ಕು ತೆಗೆದು ನೋಡಿದರೆ 67 ರಲ್ಲಿ 96 ಐಎಎಸ್ ಅಧಿಕಾರಿಗಳಿದ್ದರು, ಇವತ್ತು 253 ಇದ್ದಾರೆ ಎಷ್ಟು ಹೆಚ್ಚಿಗೆ ಆಯಿತು? ಇವರ ಪ್ರೋರೇಟ್ increase of subordinate offices and staff ಆಮೇಲೆ ಹೌಸ್, ಆರ್ಡಲಿರೇಸ್, ಪೂನ್ಸ್, ಕಾರ್ಸ್, ಡ್ರೈವರ್ಸ್ ಎಷ್ಟು ಇನ್‌ಕ್ರೀಸ್ ಆಗಿದೆ. ಇದರ ಅವಶ್ಯಕತೆ ಇತ್ತೇ? ಇದರಿಂದ ಇನ್ ಕ್ರೀಸ್ ಆಯಿತಲ್ಲ ಅವರಿಗೆ ಬೆನಿಫಿಟ್ ಆಯಿತೇ ಹೊರತು ಟ್ಯಾಕ್ಸ್ ಪೇಯರ್ಸ್ ಗೇನು ಬೆನಿಫಿಟ್ ಆಯಿತು? ನಮ್ಮ ದೇಶಕ್ಕೇನು ಬೆನಿಫಿಟ್ ಆಯಿತು? ಇದನ್ನು ಇನ್ ಕ್ರೀಸ್ ಮಾಡಿದ್ದರಿಂದ ಟ್ಯಾಕ್ಸ್ ಪೇಯರ್ಸ್‌ಗೆ ಹೊರೆಯಾಯಿತೇ ಹೊರತು ಬೆನಿಫಿಟ್ ಆಗಲಿಲ್ಲ. 1967 ರಲ್ಲಿ 12 ಜನ ಸೆಕ್ರೆಟರಿಗಳು ಇದ್ದರು, ಈಗ ಪ್ರಿನ್ಸಿಪಲ್ ಸೆಕ್ರೆಟರಿ ಸೆಕ್ರೆಟರಿ (1) ಸೆಕ್ರೆಟರಿ (2) ಅಡಿಷನಲ್ ಚೀಫ್ ಸೆಕ್ರೆಟರಿ ಇದ್ದು ಈಗ ಸೆಕ್ರೆಟರಿಯೇಟಿನಲ್ಲೇ 43 ಜನರು ಇದ್ದಾರೆ. 12 ಜನಕ್ಕೆ ಬದಲಾಗಿ 67 ಜನರು ಇದ್ದಾರೆ. ಇದೆಲ್ಲಾ ಸಾರ್ವಜನಿಕರಿಗೆ ಗೊತ್ತಾಗುವುದಿಲ್ಲ. ಆನ್-ನೋಟೀಸಬಲ್ ಬರ್ಡನ್. ಇಷ್ಟಾದರೂ ಪೇಪರ್ ಮೂವ್ ಆಗುವುದಿಲ್ಲ. ಮಾನ್ಯ ನಾಣಯ್ಯನವರ ಭಾಷೆಯಲ್ಲಿ ಹೇಳಬೇಕಾದರೆ ಆರ್ ಅಂಡ್ ಡಿ ಸೆಕ್ಷನ್‌ನಿಂದ ಮುಖ್ಯ ಕಾರ್ಯದರ್ಶಿಯವರಿಗೆ ಬೇಕಾದರೆ 10 ದಿನ ಮುಖ್ಯ ಕಾರ್ಯದರ್ಶಿಯವರಿಂದ ಲಾ ಸೆಕ್ರೆಟರಿಯವರಿಗೆ ಹೋಗಬೇಕಾದರೆ 8 ದಿವಸಗಳಾಗುತ್ತದೆ. ಹೋಗಲಿ ಇವರಿಗೆಲ್ಲಾ ಸಫಿಷಿಯೆಂಟ್ ವರ್ಕ್‌ಲೋಡ್ ಇದೆಯೇ ಎಂದು ಯಾರಾದರೂ ಲೆಕ್ಕ

ಹಾಕಿದ್ದಾರೆಯೇ? ವರ್ಕ್ ಲೋಡ್ ಅಂದರೆ ಅದನ್ನು ಹೇಗೆ ಅರ್ಥ ಮಾಡಿಕೊಳ್ಳುವುದು? ಅದು ಯಾವ ರೀತಿ ವರ್ಕ್ ಆಗುತ್ತದೆ ಈಗ ಇರುವ ಹಾಲಿ ಪದ್ಧತಿ ಏನು ಇದೆ ಈ ಹಾಲಿ ಪದ್ಧತಿಯನ್ನು ಕ್ಲರಿಕಲ್ ಓರಿಯೆಂಟೆಡ್ ಸಿಸ್ಟಂ ಎಂದು ಕರೆಯಬಹುದು. ಅದು ಹೇಗೆಂದರೆ, ನಿಮಗೆ ಯಾರೋ ಬಂದು ಅರ್ಜಿ ಕೊಡುತ್ತಾರೆ, ನೀವು To be examined and put up. ಎಂದು ನೀವು ಕಳಿಸುತ್ತೀರಿ ಸಂಬಂಧಪಟ್ಟ ಇಲಾಖಾ ಕಾರ್ಯದರ್ಶಿಗೆ ಚೀಫ್ ಮಿನಿಸ್ಟರ್ ಸೆಕ್ರೆಟರಿಯೇಟ್‌ನಿಂದ ಕಳುಹಿಸುತ್ತಾರೆ. ರೆವಿನ್ಯೂಗೆ ಬಂದರೆ ರೆವಿನ್ಯೂ ಸೆಕ್ರೆಟರಿಗೆ ಕಳಿಸುತ್ತೀರಿ. ಅವರು ಉಪಕಾರ್ಯದರ್ಶಿಗೆ, ಅವರು ಅಧೀನ ಕಾರ್ಯದರ್ಶಿಗೆ, ಅವನು ಎಸ್.ಒ.ಗೆ ಆನಂತರ ಅವನು ಕೇಸ್ ವರ್ಕರ್‌ಗೆ ಕಳಿಸುತ್ತಾನೆ. ಅಲ್ಲಿಂದ ಟಿಪ್ಪಣಿ ಶುರುವಾಯಿತು. ಕೇಸ್ ವರ್ಕರ್ ಬರೆದ ಟಿಪ್ಪಣಿಗೆ ಸೆಕ್ಷನ್ ಆಫೀಸರ್ ಇನ್ನೊಂದು ಸೇರಿಸುತ್ತಾನೆ. ಅಧೀನ ಕಾರ್ಯದರ್ಶಿಗೆ ಬಂದರೆ ಅವನೊಂದು ಟಿಪ್ಪಣಿ ಬರೆಯುವುದು, ಕೊನೆಗೆ ಎಲ್ಲಿಯವರೆಗೆ ಬರುತ್ತದೆ ಎಂದರೆ, ಸೆಕ್ರೆಟರಿಯವರ ಹತ್ತಿರ ಬರುವ ಹೊತ್ತಿಗೆ, ನಿಮ್ಮ ಹತ್ತಿರಕ್ಕೆ ಬರುವ ಹೊತ್ತಿಗೆ ಅದರ ಮೂಲ ಉದ್ದೇಶ ಅರ್ಜಿಯ ಮೂಲೋದ್ದೇಶ ಮರೆತೇ ಹೋಗಿರುತ್ತದೆ. ಟಿಪ್ಪಣಿ ಏನೇನೋ ಏನೇನೋ ಆಗಿ ಬರುತ್ತದೆ. ಆದ್ದರಿಂದ ಈ ಟಿಪ್ಪಣಿ ಹಾವಳಿ ತಪ್ಪಬೇಕು. ಎಲ್ಲರಿಗೂ ಬರೆಯುವ ಚಟ ಸಾಮಾನ್ಯವಾಗಿ ಇರುತ್ತದೆ ಏನೂ ಮಾಡುವುದಕ್ಕಾಗುವುದಿಲ್ಲ ಇದರಿ ಪರಿಣಾಮ ವಿನಾಕಾರಣ ವಿಳಂಬವಾಗುತ್ತದೆ. ಇದೇ ರೆಡ್ ಟೇಪಿಸಮ್ ಎನ್ನುವುದು. ಇದೇ ಮೂಲ ಕಾರಣ. ಇದಕ್ಕೆ ಪರಿಹಾರ ಹೇಗೆ? ಪರಿಹಾರ ಆಫೀಸರ್ ಓರಿಯೆಂಟೆಡ್ ಇನ್ ಫ್ಲೇಸ್ ಆಫ್ ಕ್ಲರಿಕಲ್ ಓರಿಯೆಂಟೆಡ್ ಸಿಸ್ಟಂ ಜಾರಿಗೆ ತರಬೇಕು. ನೀವೇನಾದರೂ ಧೈರ್ಯ ಮಾಡುವುದಾದರೆ ಹೊಸ ಸಿಸ್ಟಂ ತರುತ್ತೇವೆಂದು ಹೇಳುವುದಾದರೆ ಇದನ್ನು ಮಾಡಬಹುದು. ಏಕೆಂದರೆ ಯಾವುದೇ ಅರ್ಜಿ ಮೊದಲನೇ ಸಲಹೆ ಪರಿಶೀಲನೆ ಯಾರಿಂದ ಆಗಬೇಕು, ಕ್ಲರ್ಕ್‌ನಿಂದ ಅಲ್ಲ ಅಧಿಕಾರಿಯಿಂದಲೇ ಆಗಬೇಕು. ಅವರು ಸೆಕ್ರೆಟರಿ ಇರಲಿ ಡೈರೆಕ್ಟರ್ ಇರಲಿ ಅವರಿಂದಲೇ ಇದು ಆಗಬೇಕು. ಸಬಾರ್ಡಿನೇಟ್ಸ್ ಇದ್ದರೂ ಕೂಡ ಇವರು ಕೊಡುವ ಡಿಕ್ಟೇಷನ್ ತೆಗೆದುಕೊಂಡು ಟೈಪ್ ಮಾಡಿ ಪುಟಪ್ ಮಾಡುವುದಕ್ಕೆ ಮಾತ್ರ ಇರಬೇಕು. ಕೆಲವು ಕೇಟಗರಿಗೆ ಯಾವ ಅಧಿಕಾರಿ ಮೊದಲು ಪರಿಶೀಲನೆ ಮಾಡುತ್ತಾನೋ ಡಿಸಿಷನ್ ತೆಗೆದುಕೊಳ್ಳುವುದಕ್ಕೂ ಆತನಿಗೇ ಅಧಿಕಾರ ಬೇಕು. ಇನ್ ಸಬಾರ್ಡಿನೇಷನ್ ಇನ್ ಸರ್ವೀಸಸ್. ಏಕೆ, ಕಾನ್‌ಸ್ಟೇಬಲ್‌ನಿಂದ ಹಿಡಿದು ಸಬ್-ಇನ್ಸ್‌ಪೆಕ್ಟರ್, ರೆವಿನ್ಯೂ ಇನ್ಸ್‌ಪೆಕ್ಟರ್‌ನಿಂದ ವಿಲೇಜ್ ಅಕೌಂಟೆಂಟ್‌ವರೆಗೆ ರೆವಿನ್ಯೂ ಇನ್ಸ್‌ಪೆಕ್ಟರ್ ತಹಸೀಲ್ದಾರಿಗೆ ಕೇರ್ ಮಾಡುವ ಹಾಗಿಲ್ಲ. ತಹಸೀಲ್ದಾರ್ ಅಸಿಸ್ಟೆಂಟ್ ಕಮಿಷನರಿಗೆ ಕೇರ್ ಮಾಡುವುದಿಲ್ಲ ಅಸಿಸ್ಟೆಂಟ್ ಕಮಿಷನರ್ ಡಿ.ಸಿ.ಯವರಿಗೆ ಕೇರ್ ಮಾಡುವುದಿಲ್ಲ. ಡಿ. ಸಿ. ಡಿವಿಜನಲ್ ಕಮಿಷನರಿಗೆ ಕೇರ್ ಮಾಡುವ ಹಾಗಿಲ್ಲ. ಹೀಗೆ ಪ್ರತಿ ಇಲಾಖೆಯಲ್ಲಿ ಇನ್ ಸಬಾರ್ಡಿನೇಷನ್ ಏಕೆ? ಹೇಗೆ ಏಕೆ ಎಂದರೆ ಇದನ್ನು ನೆನಸಿಕೊಂಡೇ ಎಲ್ಲ ಹೇಳುವುದು. ಇಂಗ್ಲೀಷಿನವರ ಸರಕಾರವೇ ಚೆನ್ನಾಗಿತ್ತೆಂದು ಹಳಬರು ಹೇಳುತ್ತಾರೆ. ಅವರೇನು ಆ್ಯಂಟಿ ನ್ಯಾಷನಲ್ಸ್ ಎಂದು ಅಲ್ಲ. ಆಗಿನ ಕಾಲದಲ್ಲಿ ಯಾವುದೇ ಇಲಾಖೆಯಲ್ಲೂ ಡಿಸಿಪ್ಲಿನ್ ಇತ್ತು. ಒಬ್ಬ ತಹಸೀಲ್ದಾರ್

ಇದ್ದರೇ ಅವನ ಕೈಲಾಗುವುದನ್ನು ಅವನೇ ನಿರ್ಣಯ ಕೊಡುವನು ಜಿಲ್ಲಾಧಿಕಾರಿ ಅವನ ಕೈಯ್ಯಲ್ಲಾಗುವುದನ್ನು ಅವನೇ ನಿರ್ಣಯ ಕೊಡುತ್ತಿದ್ದನು. ಈಗ ಎಲ್ಲ ಸೆಂಟ್ರಲೈಸ್ಡ್ ಪದ್ಧತಿಯಾಗುತ್ತಿದೆ. ಇನ್ ಸಬಾರ್ಡಿನೇಷನ್ ಏಕೆ ಜಾಸ್ತಿಯಾಗಿದೆ ಎಂದರೆ ಒಬ್ಬ ಜಿಲ್ಲಾಧಿಕಾರಿ, ಒಬ್ಬ ಅಮಲ್ದಾರ್ ಸರಿ ಇಲ್ಲವೆಂದರೆ ಅವನು ರೆಕಮೆಂಡ್ ಮಾಡಿ ಬೇರೆ ಕಡೆ ಹಾಕಿಸುವ ಪದ್ಧತಿ ಇತ್ತು. ಈಗ ಆ ಡಿ.ಸಿ. ಎದುರಿಗೆ ಅವರು ಹೋಗುವುದಿಲ್ಲ. ಸೀದ ರೆವಿನ್ಯೂ ಮಂತ್ರಿ ಮನೆಗೆ ಹೋಗುತ್ತಾನೆ. ಬೇಕಾದರೇ ಅಲ್ಲೇ 4-5 ದಿವಸ ಇದ್ದು ವರ್ಗಾವಣೆ ಮಾಡಿಸಿಕೊಂಡು ಬರುತ್ತಾನೆ. ಕಾನ್ಸ್ಟೇಬಲ್ ವಿಧಾನ ಸೌಧದಿಂದ ಆದೇಶ ಮಾಡಿಸಿಕೊಂಡು ಹೋಗುತ್ತಾನೆ. ಇನ್ ಸಬಾರ್ಡಿನೇಷನ್ ಆಗಲೇಬೇಕಲ್ಲ. ಕೆಲವು ಸಬ್-ಇನ್ಸ್ಪೆಕ್ಟರ್, ಇನ್ಸ್ಪೆಕ್ಟರ್‌ಗಳು ಆ ಎಸ್. ಪಿ.ಗಳಿಗೆ ಕೇರೇ ಮಾಡುವುದಿಲ್ಲ. ಈಗ ಸಿಟಿಯಲ್ಲಿ ಇರುವವರು ಡಿ.ಸಿ.ಗಳಿಗೂ ಕೇರ್ ಮಾಡುವುದಿಲ್ಲ ಕೆಲವರು ಕಮೀಷನರಿಗೇ ಕೇರ್ ಮಾಡುವುದಿಲ್ಲ. ಏಕೆಂದರೆ ಇನ್-ಸಬಾರ್ಡಿನೇಷನ್. ನಾವು ವಿಧಾನ ಸೌಧಕ್ಕೆ ಹೋಗಿ ಮಾಡಿಸಿಕೊಂಡ ಬರುತ್ತೇವೆಂದು ಹೇಳುತ್ತಾರೆ. ಇದು ಆಗಿರತಕ್ಕಂತಹ ಪದ್ಧತಿ. ಉದಾಹರಣೆಗೆ ನೀರಾವರಿ ಇಲಾಖೆ ತೆಗೆದುಕೊಳ್ಳಿ. ಅಲ್ಲಿ ಎಕ್ಸಿಕ್ಯುಟಿವ್ ಇಂಜಿನಿಯರುಗಳು ಇಂಜಿನಿಯರುಗಳು ಇರುತ್ತಾರೆ ವರ್ಗಾವಣೆ ಮಾಡಬೇಕು. ಇಲ್ಲವೇ ಇನ್ನೊಂದು ಇಲಾಖೆಗೆ ವರ್ಗಾವಣೆ ತೆಗೆದುಕೊಳ್ಳಬೇಕು. ಈಗ ಅವರಿಗೆ ಟ್ರೈನಿಂಗ್ ಅಟಿಟ್ಯೂಡ್ ಅವರ ಸುಪೀರಿಯರ್ಸ್‌ಗೆ ಗೊತ್ತಿರುವ ಹಾಗೆ ವಿಧಾನ ಸೌಧದಲ್ಲಿ ಕುಳಿತಿರುವ ನಮಗೆ ಹೇಗೆ ಗೊತ್ತಿರುತ್ತದೆ. ಖುರ್ಚಿಯಲ್ಲಿ ಕೂಡುವ ಮಂತ್ರಿಯವರಿಗೇನು ಗೊತ್ತಿರುತ್ತದೆ. ಈ ವರ್ಗಾವಣೆ ಪದ್ಧತಿಯನ್ನು ವಿಕೇಂದ್ರೀಕರ್ಣಗೊಳಿಸಿ. ಇಲ್ಲವಾದಲ್ಲಿ ಇಲಾಖಾ ಮುಖ್ಯಸ್ಥರು ಏಕೆ ಇರಬೇಕು. ಇಲಾಖಾ ಮುಖ್ಯಸ್ಥರು ಇದ್ದ ಮೇಲೆ ಅವರಿಗೆ ಅಧಿಕಾರವನ್ನು ಕೊಡಿ. ಇದು ಹಂಚಿಕೆಯಾದರೆ ಡಿ.ಸಿ. ಅವನ ಸಬಾರ್ಡಿನೇಟ್ಸ್ ಅನ್ನೆಲ್ಲಾ ಅವನ ಹಂತದಲ್ಲಿ ಅವನೇ ವರ್ಗಾವಣೆ ಮಾಡಿಕೊಳ್ಳಬೇಕು. ಆ ಲೆಕ್ಕದಲ್ಲಿ ಮಾಡಿಕೊಳ್ಳುತ್ತಾ ಬಂದ್ಮರೆ ಡಿಸಿಪ್ಲಿನ್ ಬರುತ್ತದೆ, ಇನ್ ಸಬಾರ್ಡಿನೇಷನ್ ಹೋಗುತ್ತದೆ. ನನ್ನ ದೃಷ್ಟಿಯಲ್ಲಿ ಇನ್ ಸಬಾರ್ಡಿನೇಷನ್ is worst than corruption. ಯಾವುದೇ ಆಡಳಿತ ನಡೆಸತಕ್ಕಂತಹಾದ್ದರಲ್ಲಿ I always hold the view that insubordination has greater effect than corruption. ಈಗ ಹೇಳತಕ್ಕಂತಹ ಸಿಸ್ಟಂ ಏನು ಇದೆ ಇದು ಹೊಸದಾಗಿ ಹೇಳತಕ್ಕಂಥಾದ್ದಲ್ಲ. ಇದಕ್ಕೂ ಒಂದು ಹೇಳುತ್ತೇನೆ. ಇದರ ಬಗ್ಗೆ 1946 ರಲ್ಲಿ ಇಂಗ್ಲೆಂಡಿನಲ್ಲಿ ಒಂದು ಸಮಿತಿ ಮಾಡಿದ್ದರು. Sir Erric Coats ಅವರೇನು ಬರೆಯುತ್ತಾರೆ ಎಂದರೆ : ``This committee finding that the nature and complexity of business of government was beyond the capacity of assistants and clerks recommend replacement of the office by officers". ಅವರು ಇದನ್ನು ಅವತ್ತೇ ಬರೆದಿದ್ದಾರೆ. ಇನ್ನೂ ಏನೇನೋ ಹೇಳಿದ್ದಾರೆ ನಾನು ಅದೆಲ್ಲವನ್ನೂ ಹೇಳಲು ಹೋಗುವುದಿಲ್ಲ. ಇದು ನಮಗೆ ಹೊಸದಲ್ಲ. ಜೊತೆಗೆ ಪಾಕಿಸ್ಥಾನದಲ್ಲಿ ಆಫೀಸರ್ಸ್ ಓರಿಯೆಂಟೆಡ್ ಸ್ಕೀಮ್ ಅನ್ನು ಸೆಕ್ಷನ್ ಆಫೀಸರ್ಸ್ ಸ್ಕೀಮ್ ಎಂದು 1950 ರಲ್ಲೇ ಇಂಟ್ರಡ್ಯೂಸ್ ಮಾಡಿದರು.

ಸೆಕ್ಷನ್ ಆಫೀಸರ್ ಸ್ಕೀಮ್ ಎಂದು 1950 ರಲ್ಲಿ ಪಾಕಿಸ್ತಾನದಲ್ಲಿ ಇದನ್ನು ಅನುಷ್ಠಾನಕ್ಕೆ ತಂದರು. ಇದನ್ನು ನಮ್ಮ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಪಬ್ಲಿಕ್ ಆಡ್ಮಿನಿಸ್ಟ್ರೇಷನ್ ಇದೆಯಲ್ಲ ಪ್ರೊಫೆಸರ್ ಮಹೇಶ್ವರಿ ಎಂದು ಅವರು ಏನು ಹೇಳುತ್ತಾರೆ ಎಂದರೆ this system is quite useful and helps the people to get speedy remedy and helps the government to fix accountability and responsibility. ಎಂದು ಈ ಸಿಸ್ಟಂ ಎಂದು ಆದರೆ ಇವೆರಡೂ ಆಗುತ್ತದೆಂದು ಅವರು ಹೇಳಿದ್ದಾರೆ ಇನ್ನೊಂದು ಶೋಚನೀಯವೇನೆಂದರೆ, ಪ್ರಪಂಚದ ಯಾವುದೇ ರಾಜ್ಯಾಂಗದಲ್ಲಿ ಈ ಅಧಿಕಾರಿಗಳಿಗೆ ಟೆನ್ಯೂರ್ ಗ್ಯಾರಂಟಿ ಕೊಟ್ಟಿಲ್ಲ. ಕಾನ್ಸ್ಟಿಟ್ಯೂಷನಲ್ ಗ್ಯಾರೆಂಟಿ ಎಲ್ಲೂ ಕೊಟ್ಟಿಲ್ಲ. ನೀವು ಯಾವುದೇ ಫೋರಂನಲ್ಲಿಯಾದರೂ ಮಾತನಾಡಬಲ್ಲಿರಿ ನಿಮಗೆ ಆ ಶಕ್ತಿ ಇದೆ. ಈ ಕಾನ್ಸ್ಟಿಟ್ಯೂಷನಲ್ ಗ್ಯಾರೆಂಟಿ ಏಕೆ ಈ ರಾಷ್ಟ್ರದಲ್ಲಿ ಮಾತ್ರ ಇರಬೇಕು. ಅವರು ಎಲ್ಲಿ ನಿಮ್ಮ ಹಿಡಿತಕ್ಕೆ ಬರುತ್ತಾರೆ. ಆರ್ಟಿಕಲ್ 308 ನಿಂದ 313 ವರೆಗೆ ಕಾನ್ಸ್ಟಿಟ್ಯೂಷನಲ್ ಗ್ಯಾರೆಂಟಿ, ಟೆನ್ಯೂರ್ ಗ್ಯಾರೆಂಟಿ. ಇದರ ಪರಿಣಾಮವೇನಾಗುತ್ತದೆ? ನೋಡಿ ಇದರಲ್ಲಿ 253 ಜನ ಇದ್ದಾರೆ. ಹಿಂದೆ ಇದ್ದ ಬ್ರಾಹ್ಮಣರು ಶೂದ್ರರು ಇದೆಲ್ಲಾ ಹೊರಟು ಹೋಯಿತು ಈಗ ನ್ಯೂ ಬ್ರಾಹ್ಮನ್ಸ್ ಅಂದರೆ ಐಎಎಸ್‌ನವರು, ಅದರಲ್ಲೂ ಡೈರೆಕ್ಟ್ ಐಎಎಸ್ ಇರುವವರು ವಸಿಷ್ಠ ಗೋತ್ರದವರು ಪಾಪ ಕೆಎಸ್‌ನಿಂದ ಪ್ರಮೋಷನ್ ತೆಗೆದುಕೊಂಡಿರುವವರು ವಿಶ್ವಾಮಿತ್ರ ಗೋತ್ರದವರು. ನಮ್ಮ ಕಡೆ ವಸಿಷ್ಠ ಗೋತ್ರದ ವರಿಗೂ ವಿಶ್ವಾಮಿತ್ರ ಗೋತ್ರದವರಿಗೂ ಸಂಬಂಧವೇ ಆಗುವುದಿಲ್ಲ. ಸುಪೀರಿಯರ್ ನಾವು ವಸಿಷ್ಠ ಗೋತ್ರವೆಂದು ಅಂದುಕೊಳ್ಳುತ್ತಾರೆ. ಡೈರೆಕ್ಟ್ ಐಎಎಸ್‌ನವರಿಗೆ ಎಲ್ಲಿಲ್ಲ ದಂತಹ ಪ್ರಾಶಸ್ತ್ಯ. ನಾನು ಎಲ್ಲರನ್ನೂ ದೂರುವುದಿಲ್ಲ ಏನು 253 ಜನರು ಇದ್ದಾರೆ ಅವರಲ್ಲಿ ಬಹುಶಃ ಕೆಲವರು 8-10 ಜನರ ಲಿಸ್ಟ್ ಮಾಡಿ ನಿಮಗೆ ನಾನು ಗುಟ್ಟಾಗಿ ಹೇಳಬಲ್ಲೆ. ನೀವು ನಂಬುತ್ತೀರಾ ಒಬ್ಬ ಐ.ಎ.ಎಸ್. ಆಫೀಸರ್ ಒಬ್ಬ ಜನತಾ ದಳದ ಮಂತ್ರಿಯನ್ನು ಸಾರ್ ನಾಳೆಯಿಂದ ನೀವು ಜೇಬು ಇರುವ ಜುಬ್ಬಾ ಹಾಕಿಕೊಂಡು ಬರಬೇಡಿ ಎಂದು ಹೇಳುತ್ತಾರೆ. ಇದನ್ನು ಯಾರು ಯಾರಿಗೆ ಹೇಳಿದರು ಎಂದು ನಾನು ಗುಟ್ಟಾಗಿ ಹೇಳುತ್ತೇನೆ. ಅದಕ್ಕೆ ಸಾಕ್ಷಿಯಾರಿದ್ದರು ಎಂದೂ ಹೇಳುತ್ತೇನೆ. ಅವರು ಹಣ ತುಂಬಿ ಕೊಳ್ಳುತ್ತಾರೆಂದು ಅಲ್ಲ. ಸೆಕ್ರೆಟರಿಗೆ ಇದನ್ನು ವರ್ಗಾವಣೆ ಮಾಡಿ ಇಲ್ಲೊಂದು ಚೀಟಿ ಇನ್ನೊಂದು ಚೀಟಿ ಇದೊಂದನ್ನು ಸೇರಿಸಿ ಎಂದು ಹೇಳುವ, ಮಂತ್ರಿಗಳಾದರೆ, ನಾನು ಅದಕ್ಕೇ ಹೇಳಿದ್ದು ತರಬೇತಿ ಬೇಕು ಎಂದು. ಅವರು ನಾಳೆಯಿಂದ ಜೇಬು ಇರುವ ಜುಬ್ಬ ಹಾಕಿಕೊಂಡು ಬರಬೇಡಿ ಎಂದು ಮಂತ್ರಿಗಳಿಗೆ ಕಾರ್ಯದರ್ಶಿಗಳು ಆಜ್ಞೆ ಕೊಡಿಸಿದರು. ಇನ್ನು ಕೆಲವಕ್ಕೆ ಏನಾಗಿದೆ ಎಂದರೆ, ನಾನು ಒಂದು ಸಲ ಹೆಯನ್ನು ಮುಖ್ಯಮಂತ್ರಿಗಳಿಗೆ ಕೊಡುತ್ತೇನೆ, ಈಗ ದನ ಕಾಯುವ ಕೆಲಸ ಕಷ್ಟ. ಏಕೆಂದರೆ ದನಗಳು ಓಡಾಡುತ್ತವೆ. ಕತ್ತೆಗಳಾದರೆ ಕಾಯುವ ಕೆಲಸ ಸುಲಭ. ಒಂದು ಸಾವಿರ ಕತ್ತೆಗಳನ್ನು ನೀವು ಸರ್ಕಾರಿ ಖರ್ಚಿನಲ್ಲಿ ತೆಗೆದುಕೊಳ್ಳಿ. ಏಕೆಂದರೆ ನಿಮ್ಮಲ್ಲಿ ಕೆಲವರು ಇದ್ದಾರೆ, ಅವರು ಐದು ಜನ ಇರಬಹುದು, ಹತ್ತು ಜನ ಇರಬಹುದು, ಏನು ನಮಗೆ ತಿಳಿದಹಾಗೆ ಮಾಡುತ್ತೇವೆ, ಕೆಂಪು ಬಿಲ್ಡಿಂಗ್ ಇದೆಯಲ್ಲ ಹೋಗಿ ಎಂದು.

ಒಂದು ಕೇಸ್‌ನಲ್ಲಿ ಬೇಕಾದರೆ ದೊಡ್ಡ ಫೈಲ್ ಇಲ್ಲಿದೆ. ಒಂದು ಕೇಸ್ ಹೇಳಬೇಕಾದರೆ ಒಂದು ಗಂಟೆ ಹಿಡಿಯುತ್ತದೆ. ಅದನ್ನು ನಾನು ಉಪಯೋಗಿಸಿ ಕೊಳ್ಳುವುದಿಲ್ಲ. ಬೇಕಾದರೆ ನೋಡಿ. ಡೇಟ್‌ವಾರು ಹಾಕಿ ಏನೇನು ಎಂಥದು ಎಂದು ಹೇಳಿ ತಂದಿದ್ದೇನೆ ಒಂದು ಲೆಟರ್ ಓದಿಬಿಟ್ಟು ಆಯಿತು, ಒಂದೆರಡು ತಪ್ಪಾಗುತ್ತವೆ, ಕೆಂಪು ಬಿಲ್ಡಿಂಗ್ ಅದಲ್ಲ ಎಂದು ತೋರಿಸುತ್ತಾರೆ. ಕೆಂಪು ಬಿಲ್ಡಿಂಗ್ ತೋರುವುದಕ್ಕೆ ನನ್ನ ಜವಾನ ಸಾಕು. ಅಂತಹವರು ಕತ್ತೆ ಮೇಯಿಸಲಿ ಅವರು ಐದು ಜನ ಇದ್ದಾರೋ, ಹತ್ತು ಜನ ಇದ್ದಾರೋ ಕೆಂಪು ಬಿಲ್ಡಿಂಗ್ ತೋರಿಸುತ್ತಾರಲ್ಲ ಜನಗಳಿಗೆ, ಅವರನ್ನು ಕತ್ತೆ ಮೇಯಿಸುವುದಕ್ಕೆ ಬಿಡಿ. ಏಕೆಂದರೆ ಅದು ಸುಲಭದ ಕೆಲಸ ಕತ್ತೆಗಳು ಓಡಾಡುವುದಿಲ್ಲ. ಒಂದೇ ಕಡೆ ಇರುತ್ತವೆ.

ಶ್ರೀ ವಾಟಾಳ್ ನಾಗರಾಜ್ :– ಎಲ್ಲಿ ಕಟ್ಟುವುದು ಅವುಗಳನ್ನು?

ಶ್ರೀ ಹೆಚ್. ಎನ್. ನಂಜೇಗೌಡ :– ಸರ್ಕಾರದ ಜಮೀನು ಬೇಕಾದಷ್ಟು ಇದೆ. ಅವನ್ನು ಕಟ್ಟಿಹಾಕಬೇಕಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಕತ್ತೆಗಳನ್ನು ಕಟ್ಟಿಹಾಕಬೇಕು ಒಂದು, ಅವು ಗಳನ್ನು ಸಾಕುವುದಕ್ಕೆ ಆಹಾರ ಬೇಕು. ನೀವು ಎಷ್ಟು ಕತ್ತೆ ಎಂದು ಹೇಳಿದಿರಿ.

ಶ್ರೀ ಹೆಚ್. ಎನ್. ನಂಜೇಗೌಡ :– ಒಂದು ಹತ್ತು ಜನ ಸಿಕ್ಕಿದರೆ ಒಂದು ಸಾವಿರ ಕತ್ತೆಗಳು ಬೇಕಾಗುತ್ತದೆ. ಒಬ್ಬೊಬ್ಬರು ನೂರು ನೂರು ಕತ್ತೆಗಳನ್ನು ಕಾಯಲಿ.

ಶ್ರೀ ವಾಟಾಳ್ ನಾಗರಾಜ್ :– ಅವುಗಳನ್ನು ಯಾರೂ ಕಾಯಬೇಕಾಗಿಲ್ಲ. ಅವುಗಳೇ ಓಡಾಡುತ್ತಿವೆ. ಬಹಳ ಸೌಮ್ಯವಾದಂಥ ಪ್ರಾಣಿಗಳು. ಅವುಗಳನ್ನು ಏತಕ್ಕೆ ಇಲ್ಲಿ ಹೇಳುತ್ತೀರಿ?

ಶ್ರೀ ಹೆಚ್. ಎನ್. ನಂಜೇಗೌಡ :– ಏತಕ್ಕೆ ಹೇಳುತ್ತೇನೆ ಎಂದರೆ ನಮಗೆ ಎಷ್ಟು ದುಃಖವಾಗುತ್ತದೆ ಎಂದರೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾಗಿದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :– ಕತ್ತೆಗಳನ್ನು ಕಟ್ಟಿಹಾಕುವ ಅವಶ್ಯಕತೆಯಿಲ್ಲ. ಅವುಗಳನ್ನು ಎಲ್ಲೂ ಬಿಡುವ ಅವಶ್ಯಕತೆಯೂ ಇಲ್ಲ. ಎಲ್ಲಿ ಪೇಪರು ರದ್ದಿ ಇರುತ್ತದೆ, ಅವುಗಳನ್ನು ಹುಡುಕಿಕೊಂಡೇ ಹೋಗುತ್ತದೆ. ಫೀಲ್ಡ್ ಅದಕ್ಕೇ ಸರ್ಕಾರ ಮತ್ತೆ ಏಕೆ ಖರ್ಚು ಮಾಡಬೇಕು?

ಶ್ರೀ ಹೆಚ್. ಎನ್. ನಂಜೇಗೌಡ :– ನಾನೇಕೆ ಹೇಳುತ್ತೇನೆ ಎಂದರೆ, ಮನಸ್ಸಿಗೆ ನೋವಾಗಿ ಹೇಳುತ್ತೇನೆ ಜನರು ಅಷ್ಟು ದೂರದಿಂದ ಬರುತ್ತಿರುತ್ತಾರೆ. ಏನೋ ಒಂದು ತಪ್ಪಾಗುತ್ತದೆ ಒಂದು ಆಫೀಸ್‌ನಲ್ಲಿ. ಡಿಸಿಷನ್ ತೆಗೆದುಕೊಳ್ಳುವ ಮನುಷ್ಯನೇ ಹಾಗೆಂದು ಬಿಟ್ಟರೆ ಕೇಸ್ ವರ್ಕರ್ ಬರೆದದ್ದು, ನಾನು ಮಿನಿಸ್ಟರ್ ಆಗಿ

ಫೈಲ್ ನೋಡಿದ್ದೇನೆ. ಅವರು ಇನಿಷಿಯಲ್ ಹಾಕುವುದನ್ನು ಬಿಟ್ಟರೆ ಏನೂ ಮಾಡಿರುವುದೇ ಇಲ್ಲ. ಐಎಎಸ್‌ನವರು ಎನ್ನುತ್ತೇವೆಲ್ಲ, ಅವರು ಇನಿಷಿಯಲ್ ಹಾಕುವುದನ್ನು ಬಿಟ್ಟರೆ ಏನೂ ಮಾಡಿರುವುದೇ ಇಲ್ಲ. ಆ ಮಟ್ಟಕ್ಕೆ ಇರುತ್ತದೆ. ಏಕೆ ಬೇಕು ಇಂಥ ಸಿಸ್ಟಂ? ಇದು ಒಂದು. ಆಮೇಲೆ ಇದರಲ್ಲಿ ಇನ್ನೊಂದು ಏನಾಗಿದೆ ಎಂದರೆ ಏಕೆ ಈ ಸಿಸ್ಟಂ? ಈಗ ಆದಕ್ಕೆ ಸಾಮಾನ್ಯ ಜನರನ್ನು ಕಂಡರೆ ಸ್ವಲ್ಪ ಅನುಕಂಪ ಬೇಕಲ್ಲ; ಸ್ಪಂದಿಸಬೇಕು. ಕನ್ನಡನಾಡಿನವರು ಸ್ಪಂದಿಸುವ ಹಾಗೆ ಬೇರೆಯವರಿಗೆ ಏನು ಇರುತ್ತದೆ. ಯಾರೋ ಯುಪಿಯವರು ಬರುತ್ತಾರೆ, ಬಿಹಾರ್‌ನವರು ಬರುತ್ತಾರೆ, ಸೆಂಟ್ರಲ್ ಸರ್ವೀಸ್ ಎಂದು ಮಾಡಿಕೊಂಡು, ಹಿಂದೆ ಇದ್ದದ್ದು ಸೆಂಟ್ರಲ್ ಕೋಟಾ 75 ಪರ್‌ಸೆಂಟ್ ಇತ್ತು. ಸ್ಟೇಟ್ ಕೋಟಾ 25 ಪರ್‌ಸೆಂಟ್ ಇತ್ತು. ಬಹುಶಃ ಚರಣಸಿಂಗರು ಬಂದಾಗ ಎಂದು ಕಾಣುತ್ತದೆ ಸ್ಟೇಟ್ ಕೋಟಾ ಕೆಎಎಸ್ ನಿಂದ ಐಎಎಸ್‌ಗೆ 33 ಪರ್‌ಸೆಂಟ್ ಎಂದು ಮಾಡಿದರು. 1:3 2:3 ಎಂದು ಮಾಡಿದರು. ಈಗ ನೋಡಿ ಕರ್ನಾಟಕದಲ್ಲಿ ಹೇಗೆ ಇದೆ ಎಂದು 253 ಜನ ಹಾಲಿ ಐಎಎಸ್ ಇದ್ದಾರೆ. ಇದರಲ್ಲಿ ಡೈರೆಕ್ಟ್ ಐಎಎಸ್ 194 ಜನರು ಇದ್ದಾರೆ. ಸ್ಟೇಟ್ ಕೋಟಾದಿಂದ ಬಂದಿರುವವರು 59.23 ಪರ್‌ಸೆಂಟ್ ಇದ್ದಾರೆ. ಏಕೆ ಹೇಳಿ? ಈ ತೀರ್ಮಾನ ತೆಗೆದುಕೊಳ್ಳುವವರೆಲ್ಲಾ ಅವರೇ. ಅವರು ಹೇಳಿದ ಹಾಗೆಯೇ ಮಂತ್ರಿ ಮಂಡಲದವರು ಮಾಡುವುದು. ಯಾವ ಮುಖ್ಯಮಂತ್ರಿ ಬಂದರು ಅವರು ಹೇಳಿದ ಹಾಗೆಯೇ ಕೇಳಿಕೊಂಡು ಕುಳಿತುಕೊಳ್ಳುವುದು. ಯೋಚನೆ ಮಾಡುವ ಹಾಗೆ ಇಲ್ಲ. 23 ಪರ್‌ಸೆಂಟ್ ಇದ್ದಾಗ 59 ಜನರು ಇರುವವರು. 194 ಜನರು ಇದ್ದಾರಲ್ಲ ಡೈರೆಕ್ಟ್ ಐಎಎಸ್, ಅದರಲ್ಲಿ ಎಷ್ಟು ಜನ ಕರ್ನಾಟಕದವರು ಇದ್ದಾರೆ ಎಂದು ಒಂದು ಅಂಕಿಅಂಶ ಕೊಡಿ. ನಮಗೆ ಗೊತ್ತಾಗುತ್ತದೆ. ಇವರು ಕರ್ನಾಟಕದ ಮನುಷ್ಯರಾದರೆ ಅವರಿಗೆ ಸ್ವಲ್ಪ ಅನುಕಂಪ, ಅಂತಃಕರಣ, ನಮ್ಮ ರಾಜ್ಯ ಎಂದು ಇರುತ್ತದೆ. ಹಿಂದೆ ಏನಾಯಿತು, ಕಾವೇರಿಯದು ಬಿಗಡಾಯಿಸಬೇಕಾದರೆ ಎಲ್ಲಾ ಮದ್ರಾಸ್ ಅಧಿಕಾರಿಗಳೇ ಇದ್ದರು. ಸ್ವತಂತ್ರ್ಯ ಪೂರ್ವದಿಂದ ಈ ವ್ಯವಹಾರಗಳನ್ನು ಮಾಡಿಕೊಂಡು ಬರುವುದರಲ್ಲಿ. ಚೀಫ್ ಇಂಜಿನಿಯರ್ ಅಲ್ಲಿಯವರೇ, ದಿವಾನರುಗಳು ಅಲ್ಲಿಯವರೇ ಇದು ಕತೆ. ಅದು ಯಾವುದೇ ಇದ್ದರೂ ಕೂಡ. ನಮ್ಮ ರಾಜ್ಯದ ಮಣ್ಣಿನ ಋಣ ಎಂದು ಇರುತ್ತದಲ್ಲ, ಮಣ್ಣಿನಮಕ್ಕಳು ಎಂದು ಏಕೆ ಹೇಳುತ್ತೇನೆ ಎಂದರೆ ಮಣ್ಣಿನ ಋಣ ಆ ರಾಜ್ಯ ಕಂಡರೆ ಅನುಕಂಪ ಇರುತ್ತದೆ. ಆದ್ದರಿಂದ ನಾನೇನು ನಿಮಗೆ ಸಲಹೆ ಕೊಡುವುದು ಎಂದರೆ ಕೊನೆಯಪಕ್ಷ ಸ್ಟೇಟ್ ಕೋಟಾ 60 ಪರ್‌ಸೆಂಟಾದರೂ ಆಗಬೇಕು ಐಎಎಸ್ ಕೇಡರ್. ಇದು ಸಾಮ್ರಾಜ್ಯಶಾಹಿ ಕುರುಹು. ಇದನ್ನು ತೆಗೆದರೆ ಒಳ್ಳೆಯದು ಐಎಎಸ್ ಬೇಕಾಗಿಲ್ಲ ಈ ರಾಷ್ಟ್ರಕ್ಕೆ. ಸಾಮ್ರಾಜ್ಯಶಾಹಿ ಗುರುತು ಅನೇಕ ರಾಷ್ಟ್ರಗಳಲ್ಲಿ ಇಲ್ಲ. ಚೀನಾದಲ್ಲಿ ಈ ಸಿಸ್ಟಂ ಇಲ್ಲ. ಜಪಾನ್‌ನಲ್ಲಿ ಈ ಸಿಸ್ಟಂ ಇಲ್ಲ. ಕಾಮನ್‌ವೆಲ್ತ್ ಕಂಟ್ರೀಸ್‌ನಲ್ಲಿದೆ; ಜರ್ಮನಿಯಲ್ಲಿದೆ. ಅಮೇರಿಕಾದಲ್ಲಿಲ್ಲ. ಅವರಿಗೆ ಏಕೆ ಟೆನ್ಯೂರ್ ಕೊಡಬೇಕು ರಾಜ್ಯಾಂಗದಲ್ಲಿ ನೀವು ಎನ್‌ಡಿಸಿ ಮೀಟಿಂಗ್‌ನಲ್ಲಿ ಕೇಳಿ. ಕಂಟ್ರಾಕ್ಟ್ ಬೇಸಿಸ್ ಮೇಲೆ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಲಿ. ಮಂತ್ರಿಗಳು ಐದು ವರ್ಷ ಇರುವುದಿಲ್ಲವೇ ಒಂದು ಸಾರಿ ಚುನಾವಣೆಯಾದಮೇಲೆ. ಕಂಟ್ರಾಕ್ಟ್ ಅಪಾಯಿಂಟ್‌ಮೆಂಟ್ ಐದು ವರ್ಷಕ್ಕೆ

ಮಾಡಿ. ಕೆಲಸ ಚೆನ್ನಾಗಿ ಮಾಡಿದರೆ ಇಟ್ಟು ಕೊಳ್ಳೋಣ. ಇಲ್ಲದಿದ್ದರೆ ಮನೆಗೆ ಕಳುಹಿಸೋಣವಂತೆ. ಈ ವ್ಯವಸ್ಥೆ ಏಕೆ ಬೇಕು? ಅದನ್ನು ಯಾವ ರೀತಿ ಮಾಡುತ್ತಿರೋ ನೋಡಿ. ನಿಮಗೆ ಈ ಸಲಹೆ ಕೊಡುತ್ತೇನೆ, ಇಟ್ಟು ಕೊಳ್ಳಲೇಬೇಕು ಎಂದರೆ ಕೊನೆಯಪಕ್ಷ ಶೇಕಡ 60 ಆದರೂ ಸ್ಟೇಟ್ ಕೋಟಾದಲ್ಲಿ ಇಡಿ. ಹೊರಗಿನವರು ಬಂದು ಯಜಮಾನಿಕೆ ಮಾಡುವುದು ಬೇಡ. ಏಕೆಂದರೆ ಇಲ್ಲೆಲ್ಲೂ ಇಲ್ಲದೇ ಇಲ್ಲ. ಈಗ ಜಮ್ಮು-ಕಾಶ್ಮೀರ, ಸಿಕ್ಕಿಂ ಅಲ್ಲಿ ಮಾತ್ರ ಇದು ಆಲ್ ಇಂಡಿಯಾ ಸರ್ವೀಸ್ ಮಾನ್ಯುಯಲ್‌ದು ಹಾಪ clause No.9, Sub clause 2. ``Nothwith standing anything contained in this rule in relation to the State of Jammu and Kashmir, the number of persons recruited under sub-rule (1) Shall not up to 30 th April, 1987 exceeds at any time 50% of those posts that are shown against item 1&2. ಇದು ಜಮ್ಮು ಕಾಶ್ಮೀರ, ಅದೇ ರೀತಿ ಸಿಕ್ಕಿಂಗೂ ಹೇಳುತ್ತಾರೆ. ಅಲ್ಲಿ ಹಾಲಿ 50 ಪರ್‌ಸೆಂಟ್ ಇದೆ. ಎಲ್ಲಾ ಕಡೆಯಲ್ಲೂ 60 ಪರ್‌ಸೆಂಟ್ ಇದೆ. ಎಲ್ಲಾ ಕಡೆಯಲ್ಲೂ 60 ಪರ್‌ಸೆಂಟ್ ಮಾಡಿ. ಈಗ ಏನಾಗುತ್ತದೆ ಎಂದರೆ ಹೊರಗಡೆಯವರು ಯಾವತ್ತು ಇದ್ದರೂ ಹೋಗುತ್ತಾರೆ. ಹೋಗಬೇಕಲ್ಲ. ಇಲ್ಲಿರುವವರಿಗೆ ಆದರೆ ಜನರು ಏನು ಅನ್ನುತ್ತಾರೆ, ಇಲ್ಲಿ ವಾಸ ಮಾಡಬೇಕು, ಮತ್ತೊಂದು ಮಗದೊಂದು ಎಂದು ಅಂಜಿಕೆ ಇರುತ್ತದೆ. ಇನ್ನು ಐಪಿಎಸ್ ಸರ್ವೀಸ್‌ಗೆ ಬರೋಣ. 1967 ರಲ್ಲಿ ನನಗೆ ಗೊತ್ತಿರುವ ಹಾಗೆ 66 ಜನರು ಇದ್ದರು. ಈಗ 180 ಜನ ಆಗಿದ್ದಾರೆ. ಇನ್ನು ಇದಕ್ಕೆ ಸಬಾರ್ಡಿನೇಟ್ಸ್ ಎಲ್ಲಾ ಇದ್ದಾರೆ. ಐಎಎಸ್‌ನಲ್ಲಿ ಹೇಳಿದನಲ್ಲ, ಅದು ಇನ್‌ಕ್ರೀಸ್ ಆಗಿದೆಯಲ್ಲ, ಆ ಆರ್ಮಿನೇ ಇನ್‌ಕ್ರೀಸ್ ಆಗಿರುತ್ತದೆ ಕೆಳಗಡೆಯವರಿಗೆ. ಇದು unnoticeable expenditure and burden on the State exchequer ಎನ್ನುವುದಕ್ಕೆ ಹೇಳುತ್ತಿದ್ದೇನೆ. ದಯವಿಟ್ಟು ಒಂದು ಕೆಲಸ ಮಾಡಿ. 1967 ರಲ್ಲಿ expenditure incidental to administration ಎಷ್ಟಿತ್ತು? ಇನ್‌ಸಿಡೆಂಟಲ್ ಟು ಅಡ್ಮಿನಿಸ್ಟ್ರೇಷನ್ ಎಂದರೆ ಮನೆ ಬಾಡಿಗೆಯಿಂದ ಹಿಡಿದು, ಅವರು ಓಡಿಸುವ ವಾಹನಕ್ಕೆ ಪೆಟ್ರೋಲ್‌ನಿಂದ ಹಿಡಿದು, ಅಥವಾ ವರ್ಕ್ ಛಾರ್ಜ್ ಎಸ್ಟಾಬ್ಲಿಸ್‌ಮೆಂಟ್‌ನಿಂದ ಹಿಡಿದು ಎಲ್ಲಾ ಸೇರುತ್ತದೆ. ಏಕೆಂದರೆ ಆಗಲೂ ಅಷ್ಟೇ ಜನಸಂಖ್ಯೆ ಇದ್ದದ್ದು, ಈಗಲೂ ಅಷ್ಟೇ ಜನಸಂಖ್ಯೆ ಇರುವುದು. ಇವತ್ತು ಎಷ್ಟಾಗಿದೆ? expenditure incidental to administration. ಬಹುಶಃ ಇರಿಗೇಷನ್ ವರ್ಕ್‌ಲೋಡ್ ಅವಶ್ಯಕತೆ ಇರುತ್ತದೆ. ಅಂದರೆ ಅವರು ಜಾಸ್ತಿ ಮಾಡಿದ್ದಾರೆ. ನಮ್ಮ ಕಾಲದಲ್ಲಿ ಐದು ಜನರೋ, ಆರು ಜನರೋ ಚೀಫ್ ಇಂಜಿನಿಯರ್ಸ್ ಇದ್ದರು. ಇವತ್ತು 52 ಜನ ಇರಬೇಕು, ಇರಲಿ. ಅದು ವರ್ಕ್‌ಲೋಡ್ ಲೆಕ್ಕ ಹಾಕಿ ಮಾಡಬೇಕಾಗುತ್ತದೆ. ಆಗ 67 ರಲ್ಲಿ ಒಬ್ಬರೇ ಒಬ್ಬರು ಐಜಿಪಿ ಇದ್ದರು ಇಡೀ ರಾಜ್ಯಕ್ಕೆ. ಲಾ ಅಂಡ್ ಆರ್ಡರ್ ಬಗ್ಗೆ ಹೇಳುತ್ತಾರಲ್ಲಪ್ಪ, ನಮಗೂ ಅನಿಸುತ್ತದೆ ಇವತ್ತಿಗಿಂತ ಅವತ್ತೇ ಚೆನ್ನಾಗಿತ್ತು. ಒಬ್ಬ ಐಜಿಪಿ ಇದ್ದಾಗ ಎಂದು. ಐದು ಜನ ಡಿಐಜಿಗಳು ಇದ್ದರು, ಸಿ.ಓ.ಡಿ. ಡಿಐಜಿ, ಸೇರಿ ಇಡೀ ರಾಜ್ಯಕ್ಕೆ ನಾಲ್ಕು ಡಿವಿಜನ್‌ಗೆ ಡಿವಿಜನ್ ಕಮೀಷನರ್‌ಗಳು ಇರುವ ಹಾಗೆ

ನಾಲ್ಕು ಡಿಐಜಿಗಳು ಒಬ್ಬ ಸಿಓಡಿಗೆ ಒಬ್ಬರು ಡಿಐಜಿ, ಮುಗಿದುಹೋಯಿತು. ಈಗ 4 ಡಿಜಿಪಿಗಳು, ಅಂದರೆ ಐಜಿ ಮೇಲೆ ಎಡಿಜಿಪಿ, ಆ ಎಡಿಜಿಪಿ ಮೇಲೆ ಡಿಜಿಪಿ, 12 ಜನ ಎಡಿಜಿಪಿಗಳು ಡೈರೆಕ್ಟರ್ ಜನರಲ್ 4 ಅಡಿಷನಲ್ ಡೈರೆಕ್ಟರ್ ಜನರಲ್ 12, ಐಜಿಪಿಗಳು 20, ಕೆಳಗಡೆಗೆ ಹೋಗುತ್ತಾ ಹೋಗುತ್ತಾ ಎಷ್ಟೆಷ್ಟು ಇನ್‌ಕ್ರೀಸ್ ಆಗಿದೆ ಎಂದು ನೀವೇ ಊಹಿಸಬಹುದು. ಹಾಗಾದರೆ ಅಷ್ಟೊಂದು ಕ್ರಿಮಿನಲ್ಸ್ ಹೆಚ್ಚಾಗಿ ಬಿಟ್ಟರೇ ಸಮಾಜದಲ್ಲಿ, ನಮ್ಮ ಕರ್ನಾಟಕದಲ್ಲಿ. ಎಷ್ಟು ಎಂದರೆ 66 ರಿಂದ 180 ಎಂದರೆ ಮೂರುಪಟ್ಟು, ಇದು ಪ್ರೋರೇಟಾ ಎಂದರೆ ಎಲ್ಲಾ ಕಡೆ ಏರಿರುತ್ತದೆ. ಅಷ್ಟು ಕೆಟ್ಟುಹೋಗಿಬಿಟ್ಟಿವಾ ನಾವು? ಈ ರಾಜ್ಯ ಅಷ್ಟು ಹದಗೆಟ್ಟುಹೋಯಿತೇ? ಇಷ್ಟು ಇನ್‌ಕ್ರೀಸ್ ಮಾಡಿದರೂ ಮಾನ್ಯ ಮಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಒಬ್ಬ ವೀರಪ್ಪನನ್ನು ನಾವು ಹಿಡಿಯುವುದಿಲ್ಲ. ಇದು ಆಗತಕ್ಕಂಥದ್ದಲ್ಲ. ಆಮೇಲೆ ಇನ್ನೊಂದು ವಿಚಿತ್ರ ಸಂಗತಿ ಹೇಳುತ್ತೇನೆ. ಈಗ 1966 ರಲ್ಲಿ ನಮ್ಮರಾಜ್ಯದಲ್ಲಿ ಫಾರೆಸ್ಟ್ ಕವರೇಜ್ ಏನಿತ್ತು 32 ಪರ್‌ಸೆಂಟ್ ಇತ್ತು. ಫಾರೆಸ್ಟ್ ಕವರೇಜ್ ಇದ್ದದ್ದು 32 ಪರ್‌ಸೆಂಟ್. ಆಗ ಇಬ್ಬರು ಚೀಫ್ ಕನ್ಸರ್ವೇಟರ್ಸ್ ಇದ್ದರು. 7 ಜನ ಕನ್ಸರ್ವೇಟರ್ಸ್ ಇದ್ದರು ಇಡೀ ರಾಜ್ಯಕ್ಕೆ. ಈಗ ಫಾರೆಸ್ಟ್ ಕವರೇಜ್ ಎಷ್ಟಿದೆ? ಇನ್‌ಕ್ರೀಸ್ ಆಗಿಲ್ಲ. ಡಿಕ್ರೀಸ್ ಆಗಿದೆ 24 ಪರ್‌ಸೆಂಟ್‌ಗೆ ಬಂದಿದೆ. ಫಾರೆಸ್ಟ್ ಕವರೇಜ್ 32 ಪರ್‌ಸೆಂಟ್ ಇದ್ದದ್ದು 24 ಪರ್‌ಸೆಂಟ್‌ಗೆ ಬಂದಿದೆ. ಇವರದು ಏನಾಯಿತು ಕತೆ ಎಂದರೆ, ಇಬ್ಬರು ಚೀಫ್ ಕನ್ಸರ್ವೇರ್‌ಸ್ಟ್ರ ಅಲ್ಲ. ಈಗ ಇಬ್ಬರು ಪ್ರಿನ್ಸಿಪಾಲ್ ಚೀಫ್ ಕನ್ಸರ್ವೇಟರ್ಸ್, 4 ಅಡಿಷನಲ್ ಪ್ರಿನ್ಸಿಪಾಲ್ ಚೀಫ್ ಕನ್ಸರ್ವೇಟರ್ಸ್, 15 ಚೀಫ್ ಕನ್ಸರ್ವೇಟರ್ಸ್, ಇನ್ನು ಪ್ರೋರೇಟಾ ಎಲ್ಲಾ ಕೆಳಗಡೆಗೆ ಹೋಗುತ್ತದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ unnoticable burden on the State exchaquer. ಯಾವ ಮಂತ್ರಿಮಂಡಲದವರೂ ಸರಿಯಾಗಿ ನೋಡಿಕೊಂಡು ಬಂದಿಲ್ಲ. ಇದರಿಂದ ಏನಾಗುತ್ತಿದೆ ಅನಾಹುತ ಎಂದು. ಫಾರೆಸ್ಟ್ ಕವರೇಜ್ ಕಡಿಮೆಯಾಗಿದೆ, ಆಫೀಸರ್ಸ್ ದಂಡು, ಅಲ್ಲಿಗೆ ಲೆಕ್ಕಹಾಕಿಕೊಂಡರೆ ಇದುವೇ ಎರಡೂವರೆ ಪಟ್ಟು ಇನ್‌ಕ್ರೀಸ್ ಆಗಿರುವುದು.

1-40 ಪಿ. ಎಂ.

ಇನ್ನು ಇರಿಗೇಷನ್ ಡಿಪಾರ್ಟಮೆಂಟಿನಡಿ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಇದು ಆಯಿತು. ಆಮೇಲೆ ಸರ್ವೀಸ್‌ನಲ್ಲಿ ಇದ್ದಾರಲ್ಲ, ಇವರು. ಎಷ್ಟು ಜನಕ್ಕೆ ಬಿಡಿಎ ಸೈಟ್ ಇಲ್ಲ ಎಂದು ಲೆಕ್ಕ ಹಾಕಿಕೊಳ್ಳಿ, ಇರುವವರು ಬೇಡ. ಎಷ್ಟು ಜನಕ್ಕೆ ಇಲ್ಲ ಎಂದು ಲೆಕ್ಕ ಹಾಕಿಕೊಳ್ಳಿ. ಆಮೇಲೆ ಎಷ್ಟು ಜನ ಸ್ವಂತ ಮನೆಯನ್ನು ಬಾಡಿಗೆಗೆ ಕೊಟ್ಟು ಸರ್ಕಾರೀ ಬಂಗಲೆಯಲ್ಲಿ ಇದ್ದಾರೆ ಎನ್ನುವುದನ್ನೂ ದಯಮಾಡಿ ನೋಡಿ. ಏಕೆಂದರೆ, ಒಬ್ಬ ಕಾನ್‌ಸ್ಟೇಬಲೋ, ಒಬ್ಬ ಕ್ಲಾಸ್ ಫೋರ್ ಸರ್ವೆಂಟೋ ಅಥವಾ ಒಬ್ಬ ಗುಮಾಸ್ತನೋ ಸ್ವಂತ ಮನೆ ವಿಚಾರ ತಿಳಿಸಿದರೆ ನೋಟೀಸ್ ಕೊಟ್ಟು ಗವರ್ನಮೆಂಟ್ ಕ್ವಾರ್ಟರ್ಸ್‌ನಿಂದ ಒದ್ದು ಓಡಿಸುತ್ತಾರೆ. ನನಗೆ ಗೊತ್ತಿದೆ, 30 ಸಾವಿರ, 35 ಸಾವಿರಕ್ಕೆ ಬಾಡಿಗೆಗೆ ಕೊಟ್ಟಿದ್ದಾರೆ, ಸರ್ಕಾರೀ ಮನೆಯಲ್ಲಿಯೇ ಇದ್ದಾರೆ. ಇವರೆಲ್ಲಾ ನಮ್ಮ ರಾಜ್ಯದ

ಆಗುಹೋಗುಗಳ ನಿರ್ವಹಣೆ ಮಾಡತಕ್ಕಂಥ ಮುಂಚೂಣಿಯಲ್ಲಿರತಕ್ಕಂತಹ ಜನಗಳು. ಇವರು ನಿಷ್ಠಾವಂತರು. ಅದನ್ನು ನೀವು ಮಾಡಬೇಕಾಗುತ್ತದೆ. ಇದಕ್ಕೆ ರೆಮಿಡಿ ಏನು? ರೆಮಿಡಿಯನ್ನೂ ನಾನು ಏನಾದರೂ ಹೇಳಬೇಕಲ್ಲ. ಎರಡು ವಿಧದ ರೆಮಿಡಿ ಇದೆ. ಒಂದು ಇರುವ ಸಿಸ್ಟಂಅನ್ನು ಕಂಟಿನ್ಯೂ ಮಾಡುತ್ತೇನೆಂದರೆ ಒಂದು ಆಗಬೇಕಾಗುತ್ತದೆ. There should be a permanent standing committee of the Legislature with full powers to examine and determine the workload required for each Officer of different cadre and then to suggest for the reduction of existing strength in all levels. In case of expansion of the Officers or the staff in any service or creation of any new post in the Government in any rank, the Standing Committee's approval should be mandatory. The standing committee should have as its Chairman, the Leader of the Opposition and a minimum of fifty percent of members should be from the opposition. The members of the committee should not be bound by party whip. ಪಾರ್ಟಿ ವಿಪ್ ಕೊಟ್ಟು ಬಿಟ್ಟು ಮೆಜಾರಿಟಿ ಒಪೀನಿಯನ್ ಮಾಡಿಕೊಂಡು ಹೋಗುವ ಹಾಗೆ ಅಲ್ಲ ಅದು ಆಗಬೇಕು. The Committee shall have the powers to avail the services of any expert in the field of public administration. It should be mandatory on the part of Governmnet to implement all the recommendations of the Standing Committee. The leader of the opposition, ಇದೆಲ್ಲಾ ಕೆಲಸ ನಡೆಸುವುದಕ್ಕೆ ಅಲ್ಲ. ಸ್ಟ್ರೆಂಗ್ತ್ ನೋಡಬೇಕು.

ಶ್ರೀ ಹೆಚ್. ಶಿವಪ್ಪ :- ಇದು ಸೂಪರ್ ಗವರ್ನಮೆಂಟ್.

ಶ್ರೀ ಎಚ್. ಎನ್. ನಂಜೇಗೌಡ :- ಇದು ಸೂಪರ್ ಗವರ್ನಮೆಂಟ್ ಅಲ್ಲ. ಗವರ್ನಮೆಂಟ್ ಮಾಡುವ ಕೆಲಸ ಬೇರೆ. ಇದು ನಾನು ಹೇಳಿದೆನಲ್ಲ,.... Unnoticeable burden on the State Exchequer. ಎಂದು ಇದು ಕಡಿಮೆ ಆಗಬೇಕಲ್ಲ. ತಿಂದುಹಾಕುತ್ತಿದೆ ರಾಜ್ಯದ ಹಣವೆಲ್ಲಾ. ಅಭಿವೃದ್ಧಿಗಳೆಲ್ಲಿ ಆಯಿತು. ನೀವು Army of Officers ಇಟ್ಟುಕೊಂಡು.

ಶ್ರೀ ಹೆಚ್. ಶಿವಪ್ಪ :- 1967 ನೆಯ ಇಸವಿಯಿಂದ ಹೋಲಿಸಿದಿರಲ್ಲ ಇಷ್ಟು ಜನ ಇದ್ದಾರೆ ಎಂದು ಅದಕ್ಕೆ ಕ್ರೈಮ್ ರೇಟ್ ಏನು ಇನ್‌ಕ್ರೀಸ್ ಆಗಿದೆ, ಪಾಪ್ಯುಲೇಷನ್ ಏನು ಇನ್‌ಕ್ರೀಸ್ ಆಗಿದೆ. What is the corresponding increase ಎನ್ನುವುದನ್ನು ನೀವು ಹೇಳಲಿಲ್ಲ. ಒನ್ ಸೈಡ್ ಮಾತ್ರ ನೀವು ಹೇಳಿದ್ದಿರಿ.

ಶ್ರೀ ಎಚ್. ಎನ್. ನಂಜೇಗೌಡ :- ಅದನ್ನು ನೀವು ಹೇಳಿ?

SRI H. SHIVAPPA :- Crime rate should be linked ಮಾನ್ಯ ನಂಜೇಗೌಡರು ಬಹಳ ನಿಷ್ಪಕ್ಷಪಾತವಾಗಿ ಒಳ್ಳೆಯ ಪಾರ್ಲಿಮೆಂಟೇರಿಯನ್ ರೀತಿಯಲ್ಲಿ ಮಾತನಾಡುತ್ತಾರೆಂದು ಹೇಳಿದಾಗ He must given an healthy suggestion also.

(INTERRUPTIONS)

ಉಪಾಧ್ಯಕ್ಷರು :- ತಾವು ಮಾತನಾಡಿವಾಗ ಹೇಳಿರಿ. ಅವರಿಗೆ ಅವಕಾಶ ಕೊಡಿ.

ಶ್ರೀ ಎಚ್. ಎನ್. ನಂಜೇಗೌಡ :- ಆಮೇಲೆ The Leader of the Opposition and the Law Minister will be the ex-officio members and others will be appointed by the Speaker in consultation with the Leader of the House and the Opposition Leader. ಇದು ಒಂದು ವಿಧ. ಎರಡನೆಯ ವಿಧ ಏನೆಂದರೆ, ಪ್ರೆಸೆಂಟ್ ಸಿಸ್ಟಂ ಬೇಡ ಎಂದು. ನೋಡಿ ನೀವೇನಾದರು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್‌ಗೆ ಹೋಗಿ ಈ ಪ್ರೆಸೆಂಟ್ ಸಿಸ್ಟಂ ತೆಗೆದು ಹಾಕಿ ಬೇರೆ ಸಿಸ್ಟಂ ಮಾಡುವುದಕ್ಕೆ ಆಗುತ್ತದೆಯೇ ಎಂದು ನೀವೇನಾದರೂ ನಾವು ರಿಆರ್ಗನೈಸೇಷನ್ ಮಾಡುವುದಕ್ಕೆ ಪ್ರಯತ್ನ ಪಡುತೇವೆಂದರೆ ನೀವು ಮಾಡಿ ತೋರಿಸಬಹುದು. Let us begin from Karnataka itself. ಇವತ್ತು ಸೆಕ್ರೇಟರಿಯಲ್ ಸಿಸ್ಟಂ ಏನು ಇದೆ you do away with the system. ನಾನು ಏಕೆ ಹೇಳುತ್ತಿದ್ದೇನೆಂದರೆ ಆಗ ನಾವು 1967 ರಲ್ಲಿ ವಿಧಾನಸೌಧದಲ್ಲಿ ಬಂದಾಗ ಇಡೀ ಮಂತ್ರಿಗಳಿಗೆ ಇಡೀ ಡಿಪಾರ್ಟ್‌ಮೆಂಟಲ್ ಸೆಕ್ರೇಟರೀಸ್ ಎಲ್ಲಾ ಇಲ್ಲೇ ಇದ್ದರು. ಇವತ್ತು ಮಲ್ಟಿ ಸ್ಟೋರೀಡ್ ಬಿಲ್ಡಿಂಗ್ ಎಷ್ಟು ಕಟ್ಟಿಸಿದರೂ ಸಾಲುತ್ತಲೇ ಇಲ್ಲ. ಇದಕ್ಕೆಲ್ಲಾ ಎಷ್ಟು ಆಗುತ್ತದೆ ಖರ್ಚು? ಇರಲಿ. ಆಗ ಏನು ಮಾಡಬಹುದು ಎಂದರೆ ನಾನು ಮೊದಲೇ ಹೇಳಿದ ಹಾಗೆ ಚೈನಾ, ಜಪಾನ್, ಸ್ವೀನ್, ಯುಎಸ್‌ಎ ಅಲ್ಲಿ ಬೇರೆ ಸಿಸ್ಟಂ ಮಾಡಿಕೊಂಡಿದ್ದಾರೆಂದು ನನಗೆ ಗೊತ್ತಾಗಿರುವುದು. ನಾನು ಅವರಿವರನ್ನು ಕೇಳಿ ತಿಳಿದುಕೊಂಡಿರತಕ್ಕದ್ದು. ಅಲ್ಲಿ ರೆಡ್ ಟೇಪಿಸಂ ಕಡಿಮೆ, ಕ್ವಿಕ್‌ಆಗಿ ಕೆಲಸ ಆಗುತ್ತದೆ. As a first step, dispense with all the Secretaries and the departmental staff of all departments except, ಸರ್ಕಾರ ನಡೆಸಬೇಕಾದರೆ ನಾಲ್ಕು ಇಲಾಖೆ ಸಾಕು, ಮುಖ್ಯವಾಗಿ ಬೇಕಾಗಿರುವುದು, ಸೆಕ್ರೆಟರಿಯೇಟ್ ಲೆವೆಲ್‌ನಲ್ಲಿ ಒಂದು ಯಾವುದು ಎಂದರೆ, ಫೈನಾನ್ಸ್, ಕೋ-ಆರ್ಡಿನೇಟಿಂಗ್ ಡಿಪಾರ್ಟ್‌ಮೆಂಟ್ಸ್ ಎಂದು ಇದನ್ನು ನಾನು ಕರೆಯುವುದು ; ಎರಡನೆಯದು ಪ್ಲಾನಿಂಗ್, ಮೂರನೆಯದು ಲಾ ಸೆಕ್ರೆಟರಿ, ಲೀಗಲ್ ಒಪಿನೀಯನ್ ಬೇಕಾಗುತ್ತದೆ. ಚೀಫ್ ಸೆಕ್ರೆಟರಿ ಒಬ್ಬ ಇರಬೇಕಾಗುತ್ತದೆ. ಇವಿಷ್ಟು ಇಟ್ಟುಕೊಂಡು The Heads of Departments must be equipped with sufficient powers. ನೇರವಾಗಿ ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್ ಆ ಮಿನಿಸ್ಟರ್ ಮುಂದೆ ಬರುವ ಹಾಗೆ ಇರಬೇಕು. ಸೆಕ್ರೆಟರಿ ಮುಂದೆ ಬಂದು ನಂತರ ಬರುವ ಹಾಗೆ ಅಲ್ಲ. When a decision is taken at the level of the Minister, the Minister's Secretariat should issue the Government Order. ಈ

ಸೆಕ್ರೆಟೇರೀಯೇಟ್ ಬೇಡ, ಕ್ವಿಕ್‌ಆಗಿ ಆಗುತ್ತದೆ. ಟ್ರಾನ್ಸ್‌ಫೋರ್ಟ್ಸ್ ತೆಗೆದುಕೊಂಡರೆ ಟ್ರಾನ್ಸ್‌ಪೋರ್ಟ್ ಕಮೀಷನರ್ ಬರುತ್ತಾರೆ ನಿಮ್ಮ ಆಫೀಸ್‌ನಲ್ಲಿ ಸಬ್‌ಮಿಟ್ ಮಾಡುತ್ತಾರೆ. ಮಂತ್ರಿಗಳು ಏನು ಮಾಡಬೇಕು ಎಂದರೆ ಮಂತ್ರಿಗಳಿಗೆ ಸೀನಿಯರ್ ಪೋಸ್ಟ್ ಆಫೀಸರ್ಸ್ ಅನ್ನು ಅವರ ಸೆಕ್ರೆಟರಿಗಳಾಗಿ ಮಾಡಿಕೊಳ್ಳಬೇಕು. ಹಾಗೆ ಮಾಡಿಕೊಂಡರೆ ಅನುಕೂಲ ಆಗುತ್ತದೆ ಎನ್ನತಕ್ಕದ್ದು. ಆಮೇಲೆ If pre-supposes, ಈ ರೂಟೀನ್ ಮ್ಯಾಟರ್ಸ್ ಇರುತ್ತವಲ್ಲಾ ಟ್ರಾನ್ಸ್‌ಫರ್ಸ್, ಪ್ರಮೋಷನ್ಸ್ ಇತ್ಯಾದಿ ಇವೆಲ್ಲಾ ಡಿಪಾರ್ಟ್‌ಮೆಂಟಲ್ ಹೆಡ್ಸ್ ಮತ್ತು ಸಬಾರ್ಡಿನೇಟ್‌ಗೆ ಬಿಟ್ಟು ಬಿಡಬೇಕು ಈ ರೂಟೀನ್ ಮ್ಯಾಟರ್ಸ್‌ನ್ನು. ರೂಟೀನ್ ಮ್ಯಾಟರ್ಸ್ ಏಕೆ ಬಿಡೋಣ ನಮ್ಮ ಹತ್ತಿರ ಯಾರು ಬಂದಾರು ಎಂದು ಮಂತ್ರಿಗಳು ಅಂದುಕೊಂಡರೆ ನಾವೇನು ಮಾಡುವುದಕ್ಕೆ ಆಗುವುದಿಲ್ಲ ಈ ಟ್ರಾನ್ಸ್‌ಫರ್ ಏಕೆ ಇಟ್ಟುಕೊಳ್ಳುತ್ತೇವೆ ಎಂದರೆ ಜನ ನಮ್ಮ ಹತ್ತಿರ ಬರಬೇಕು. ಎಂಎಲ್‌ಎಸ್‌ಗಳನ್ನು ಕಂಟ್ರೋಲ್ ಮಾಡಬೇಕಾದರೂ ಟ್ರಾನ್ಸ್‌ಫರ್ ಇಟ್ಟುಕೊಳ್ಳಬೇಕು ಏಕೆಂದರೆ ಒಬ್ಬೊಬ್ಬ ಎಂಎಲ್‌ಎ ಒಂದೊಂದು ಟ್ರಾನ್ಸ್‌ಫರ್ ಕೇಳುತ್ತಾರೆ, ಅದು ಆಗುವುದು ಬೇಡ. ರೂಟೀನ್ ಮ್ಯಾಟರ್ಸ್ ಎಲ್ಲಾ ಡಿಪಾರ್ಟ್‌ಮೆಂಟಲ್ ಹೆಡ್ಸ್‌ಗೆ ಬಿಟ್ಟು ಬೇರೆ ವಿಚಾರವನ್ನು ನೀವು ನೋಡತಕ್ಕದ್ದು ಒಳ್ಳೆಯದು. ಈ ರೀತಿ ಆದರೆ ರೆಡ್ ಟೇಪಿಸಂ ಕಡಿಮೆ ಆಗುತ್ತದೆ, ಡಿಸಿಪ್ಲಿನ್ ಬರುತ್ತದೆ. It will avoid insubordination also. ಇಷ್ಟು ಹೇಳಿ ಈ ಆಡಳಿತದ ಬಗ್ಗೆ ನಾನು ಇಷ್ಟಕ್ಕೆ ನಿಲ್ಲಿಸುತ್ತೇನೆ ಇನ್ನು ಲೋಕಾಯುಕ್ತದ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಹೋದಸಲ ಹೇಳಿದ್ದೇನೆ ಲೋಕಾಯುಕ್ತ ಆ್ಯಕ್ಟ್ ಮಾಡಿದರೆ ಹಿಂದೆ ದೂರು ಕೊಡಬೇಕಾದರೆ ಇಷ್ಟು ದುಡ್ಡು ಕಟ್ಟಿ ದೂರು ಕೊಡಬೇಕೆಂದು ಇತ್ತು. ಪಾಪ ನಮ್ಮ ಮೊಯಿಲಿಯವರ ಕಾಲದಲ್ಲಿ ಏನು ಮಾಡಿದರು ಎಂದರೆ ಆ ಲೋಕಾಯುಕ್ತ ಡಿಜಿಪಿಯನ್ನು ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್ ಎಂತೆಲೂ ಮಾಡಿಬಿಟ್ಟರು. ಲೋಕಾಯುಕ್ತಕ್ಕೆ ಅಸಿಸ್ಟ್ ಮಾಡಲು ಈಗ ಇಲ್ಲ. ಇಂಡಿಪೆಂಡೆಂಟ್. ಲೋಕಾಯುಕ್ತದಲ್ಲಿರುವ ಇನ್ಸ್‌ಪೆಕ್ಟರ್‌ಗಳು ಏನು ಮಾಡುತ್ತಾರೆಂದರೆ, ಸಬ್ ರಿಜಿಸ್ಟ್ರಾರ್‌ಗಳು, ಫುಡ್ ಇನ್ಸ್‌ಪೆಕ್ಟರ್‌ಗಳು ಎಲ್ಲರನ್ನೂ ಲಿಸ್ಟ್ ಮಾಡಿ ಕೊಳ್ಳುವುದು. ಇವರೇ ಒಂದೊಂದು ಕಂಪ್ಲೈಂಟ್ ತರಿಸಿಕೊಳ್ಳುವುದು, ಅವರನ್ನು ಹೆದರಿಸುವುದು. ಇದು ಈ ಮಾಮೂಲಿ. ಮೊದಲು ಯಾರಾದರೂ ಲೋಕಾಯುಕ್ತಕ್ಕೆ ಹೋಗುತ್ತೀರಾ ಎಂದರೆ ಕೈ ಮುಗಿಯುವವರು ಬೇಡ ಎಂದು. ಈಗ ಎಲ್ಲಾ ಅಲ್ಲೇ ಅಲ್ಲಿಯೇ ಅಟ್ರಾಕ್ಷನ್ ಜಾಸ್ತಿ ಏಕೆ? ಆದ್ದರಿಂದ ಮೊದಲು ಆ್ಯಕ್ಟ್ ಮಾಡಿದಾಗ ಏನು ಇತ್ತೋ The police agency which is attached to the Lokayuktha is to act according to the directions of the Lokayuktha. without his permission he should not act. ಈಗ ಅದರ ಮೂಲ ಉದ್ದೇಶವೇ ಹೊರಟು ಹೋಗಿದೆ. ಅದರಿಂದ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್ ಮಾಡಿ ಬಿಟ್ಟು ಅವರಿಗೆ ಎಲ್ಲೂ ಇಲ್ಲದೇ ಇರತಕ್ಕ ಒಂದು ಅಧಿಕಾರವನ್ನು ಕೊಟ್ಟ ಹಾಗೆ ಮಾಡಿ ಈಗ ಲೋಕಾಯುಕ್ತವನ್ನು ಅವರು ಕೇಳುವ ಹಾಗೆಯೇ ಇಲ್ಲ. ಇವರೇ ನೇರವಾಗಿ ಅರ್ಜಿ ತೆಗೆದುಕೊಳ್ಳಬಹುದು, ಇವರೇ ಇನ್‌ವೆಸ್ಟಿಗೇಷನ್ ಮಾಡಬಹುದು. ಅದನ್ನು ಮೊದಲು ವಿತಡ್ರಾ ಮಾಡಿ. ಯಾವುದು ನಮ್ಮ ಮಾನ್ಯ ಖರ್ಗೆಯವರ ಕಾಲದಲ್ಲಿ ಆಯಿತಲ್ಲಾ,

ಆ ಆರ್ಡರನ್ನು ವಿತ್‌ಡ್ರಾ ಮಾಡಿ, ಮೊದಲು ಇದ್ದಹಾಗೆಯೇ ಇರಬೇಕು ಎನ್ನತಕ್ಕದ್ದು ಒಂದು ಸಲಹೆ.

ಶ್ರೀ ಸಯ್ಯದ್ ಜುಲ್ಫೀಕರ್ ಹಷ್ಮಿ :- ಮಾನ್ಯ ಸದಸ್ಯರು ಉತ್ತಮವಾದ ಸಲಹೆಗಳನ್ನು ಕೊಟ್ಟರು ಸರ್ಕಾರಕ್ಕೆ. ಇಷ್ಟು ಐಎಎಸ್ ಆಫೀಸರ್ ಏಕೆ ಅದೆಲ್ಲಾ ಬಹಳ ಒಳ್ಳೆಯ ಸಲಹೆ ಇದೆ ಸಾಹೇಬರದ್ದು. ಮಿಸಿಸ್ಪರ್ಸ್ ಇಷ್ಟು ಜನ ಏತಕ್ಕೆ? ಅದರ ಬಗ್ಗೆ ನೀವು ಸಲಹೆ ಕೊಡಬೇಕು.

ಶ್ರೀ ಎಚ್. ಎನ್. ನಂಜೇಗೌಡ :- ಅದನ್ನು ಮೊದಲೇ ಹೇಳಿಬಿಟ್ಟಿ. ಆಮೇಲೆ ಮೊನ್ನೆ ನಮ್ಮ ಮುಖ್ಯಮಂತ್ರಿಗಳು ಒಂದು ಮಾತು ಸಭೆಯಲ್ಲಿ ಹೇಳಿದರಿ. ಬೆಂಗಳೂರು ನಗರದಲ್ಲಿ ಎಂಟು ಲಕ್ಷ ವೆಹಿಕಲ್ಸ್ ಓಡಾಡುತ್ತವೆ, ಹೊರಗಡೆಯಿಂದ ಬರುವವೂ ಇರುತ್ತವೆ. ಎರಡು ಲಕ್ಷ ಹೊರಗಡೆಯಿಂದ ಬರುತ್ತವೆ, ಒಟ್ಟು ಹತ್ತು ಲಕ್ಷ ಲೆಕ್ಕ ಹೇಳಿದರು. ಇಲ್ಲಿ ಮೇಂಟ್ಯಿನೆನ್ಸ್ ವಿಚಾರ. ಹತ್ತು ಲಕ್ಷ ವೆಹಿಕಲ್ಸ್ ಓಡಾಡ ಬೇಕಾದರೆ ಅವರು ಟ್ಯಾಕ್ಸ್ ಕೊಡುತ್ತಾರೆ. ಈಗ ಫೈನಾನ್ಸ್ ಮಿನಿಸ್ಟರ್ ಸಹ ಈ ಕಡೆಗೆ ಕಿವಿ ಕೊಡಬೇಕು, ಮಾನ್ಯ ಮುಖ್ಯಮಂತ್ರಿಗಳೂ ಈ ಕಡೆ ಕಿವಿ ಕೊಡಬೇಕು. ಮಾನ್ಯ ಪ್ರಕಾಶ್‌ರವರೇ, ನೀವು ನಿಮ್ಮ ಸೀಟಿಗೆ ಬನ್ನಿ. ಎಂಟು ಲಕ್ಷ ಬೆಂಗಳೂರಿನಲ್ಲಿ ವೆಹಿಕಲ್ಸ್ ಓಡಾಡುತ್ತವೆ, ಹೊರಗಡೆಯಿಂದ ಎರಡು ಲಕ್ಷ ಬರುತ್ತವೆ ಎಂದು ತಾವು ಹೇಳಿದರಿ. ಈ ರೋಡ್ ರಿಪೇರಿ ಮಾಡಬೇಕಲ್ಲ. ಅವರು ಕೊಟ್ಟ ಟ್ಯಾಕ್ಸ್ ಎಲ್ಲಾ ನೀವು ವಸೂಲಿ ಮಾಡಿಕೊಳ್ಳುತ್ತೀರಿ. ಬೆಂಗಳೂರು ಜನರ ಮೇಲೆ ಟ್ಯಾಕ್ಸ್ ಹಾಕಿ ನೀವು ಊರು ಮೇಂಟೇನ್ ಮಾಡಿ ಎಂದು ಹೇಳುತ್ತೀರಿ? Why don't you pass on the Motor Vehicles tax to the Bangalore Mahanagara Palike? This extra burden why do you put on the citizens of Bangalore city? ನೀವು ದಯಮಾಡಿ ಆ ಮೋಟಾರ್ ವೆಹಿಕಲ್ ಟ್ಯಾಕ್ಸ್ ಬಗ್ಗೆ ಮಾನ್ಯ ಅನಂತನಾಗ್ ಅವರು ಬಂದಿದ್ದೀರಿ, ಏನಾದರೂ ಮಾಡಿ ನೀವು ಅದನ್ನು ಮಾಡಿಕೊಂಡು ಆ ಮೋಟರ್ ವೆಹಿಕಲ್ ಟ್ಯಾಕ್ಸ್ ಎಲ್ಲ ಕಾರ್ಪೊರೇಷನ್‌ಗೆ ಕೊಡಿಸಿ. ಇದೊಂದು ಸಲಹೆ. ಇನ್ನು ಬಿ.ಡಿ.ಎ. ಬಗ್ಗೆ ಒಂದು ಸಲಹೆ ಕೊಡುವುದಾದರೆ, It ha s become redundand. ಲೇಔಟ್‌ಗಳನ್ನು ಮಾಡಬೇಕು. ಲೇಔಟ್ಸ್ ಎಂದರೆ ಏನರ್ಥ? ಎಷ್ಟು ಎಕರೆಗಳಿರಬೇಕು? ಮೊನ್ನೆ ನನಗೆ ಒಂದು ಕೇಸ್ ಬಂದಿತ್ತು. ಏನೆಂದರೆ, ಆರ್. ಟಿ. ನಗರದಲ್ಲಿ ಒಂದು ಕಾರ್ನರ್ ಸೈಟ್ ಇದೆ, ಅದರ ಅಳತೆ 60X50 ಇರಬಹುದು, ಅದನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ, ನೋಟಿಫೈ ಮಾಡಲಾಗಿದೆ. ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು, ಸಂಬಳಕ್ಕಾಗಿ ಹರಾಜು ಹಾಕಿಕೊಳ್ಳುವುದು, ಏಕೆಂದರೆ, ಸಂಬಳಕ್ಕಾಗಿ ದುಡ್ಡು ಇರುವುದಿಲ್ಲವಲ್ಲ. ಅಲ್ಲಿ ಪರಿಸ್ಥಿತಿ ಏನಾಗಿದೆಯೆಂದರೆ, ಬರೀ ನೋಟಿಫೈ, ಡಿ-ನೋಟಿಫೈ ಮಾಡಿಕೊಂಡು ಬಂದಿದ್ದಾರೆಯೇ ವಿನಾಃ ಇತ್ತೀಚೆಗೆ ಯಾವುದೇ ಲೇಔಟ್‌ಗಳನ್ನು ಮಾಡಲಿಲ್ಲ. ಆದುದರಿಂದ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ರದ್ದುಗೊಳಿಸಬೇಕೆಂದು ಹೇಳುತ್ತೇನೆ. ಹೇಗಿದ್ದರೂ ಬಿ.ಎಂ.ಆರ್.ಡಿ.ಎ. ಸ್ಥಾಪಿಸಿರುವುದರಿಂದ ಪ್ಲಾನಿಂಗ್‌ಗೆ ಸಂಬಂಧಪಟ್ಟ ಕೆಲವು

ಕೆಲಸಗಳನ್ನೆಲ್ಲಾ ಈ ಸಂಸ್ಥೆಗೆ ವಹಿಸಿ ಮತ್ತು ನಿವೇಶನಗಳನ್ನು ಅಭಿವೃದ್ಧಿಗೊಳಿಸಬೇಕು, ಲೇಔಟ್‌ಗಳನ್ನು ಮಾಡಬೇಕೆಂಬ ಉದ್ದೇಶವೇನಾದರೂ ಇದ್ದರೆ ಗೃಹಮಂಡಳಿಗೆ ವಿಲೀನ ಗೊಳಿಸಿ. ಈ ಸಂಸ್ಥೆ ಬೇಕಾಗಿಲ್ಲ, ಇದೊಂದು ಬಿಳಿಯಾನೆ. ಇದರಿಂದ ಜನರಿಗೆ ಶಿಕ್ಷೆ, ಹಿಂಸೆಯಾಗುವುದು ಬೇಡ. ಇನ್ನೊಂದು ವಿಷಯವೇನೆಂದರೆ, ಇದು ಮಾನ್ಯ ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರಿಗೆ ಗೊತ್ತಿದೆಯೋ ಏನೋ ಗೊತ್ತಿಲ್ಲ. ನನಗೆ ಗೊತ್ತಿರುವ ಪ್ರಕಾರ ಬಿ.ಡಿ.ಎ. ಆಕ್ಟ್‌ನಲ್ಲಿ ತಿಳಿಸಿರುವಂತೆ ಆ ಸಂಸ್ಥೆಯ ಅಧಿಕಾರಿ ಗಳಾಗಲೀ, ನೌಕರರುಗಳಾಗಲೀ ಸ್ವೇ ಸೈಟ್ಸ್‌ಅನ್ನು ಮಾಡಿಕೊಳ್ಳುವಂತಿಲ್ಲ. ಆದರೆ, ಸ್ವೇ ಸೈಟ್‌ಗಳನ್ನು ಈಗ ಅವರೇ ತೆಗೆದುಕೊಳ್ಳುತ್ತಿದ್ದಾರೆ, ಅವರು ಯಾರೆಂದು ಹೇಳುವುದು ಬೇಡ, ಅವರ ನೆಂಟರಿಷ್ಟರುಗಳಿಗೆ ಸ್ವೇ ಸೈಟುಗಳನ್ನು ಮಾಡಿಕೊಡುತ್ತಿರುವುದರಿಂದ , ಬಿ.ಡಿ.ಎ. ಒಂದು ರೀತಿ ಏನಾಗಿದೆಯೆಂದರೆ, It has become redundant. ಕಳೆದ ಹತ್ತು ವರ್ಷಗಳಿಂದ ಏನು ಕೆಲಸ ಮಾಡಿದ್ದಾರೆ? ಏನೂ ಮಾಡಿಲ್ಲ. ಬಿ.ಟಿ.ಎಂ. ಲೇಔಟ್ ಮಾಡಿದ ನಂತರ ಇನ್ಯಾವುದೇ ಲೇಔಟ್ ಗಳನ್ನು ಮಾಡಿದಂತೆ ಕಾಣುವು ದಿಲ್ಲ. ಕೆ.ಕೆ. ಮೂರ್ತಿಗಳು ಹೋದ ಬಳಿಕ 1987ರ ನಂತರ ಏನೂ ಮಾಡಿಲ್ಲ, ಸುಮಾರು ಹತ್ತು ವರ್ಷಗಳಾಗುತ್ತಾ ಬಂತು. ಬಿಳಿಯಾನೆ ಯಾಗಿರುವ ಬಿ.ಡಿ.ಎ. ಇನ್ನು ಏಕಿರಬೇಕು? ಆ ಪ್ರಾಧಿಕಾರದಲ್ಲಿರುವವರು ಏನು ಮಾಡಿದ್ದಾರೆ? ಸುಮ್ಮನೆ ತೊಂದರೆ ಕೊಡುವುದಕ್ಕೆ ಬಿ.ಡಿ.ಎ.....

ಶ್ರೀ ಎಂ. ಪಿ. ಪ್ರಕಾಶ್ :- ನಾನು ಹಿಂದೆ ಬಿ.ಡಿ.ಎ. ಮಂತ್ರಿಯಾಗಿದ್ದಾಗ ಕೂಡ ಮಾಡಿಸಿದ್ದೇನೆ.

ಶ್ರೀ ಹೆಚ್. ಎನ್. ನಂಜೇಗೌಡ :- ಎಷ್ಟು ಲೇಔಟ್ಸ್ ಮಾಡಿಸಿದ್ದೀರಿ?

ಶ್ರೀ ಎಂ. ಪಿ. ಪ್ರಕಾಶ್ :- ಆಗ ಸ್ವಲ್ಪ ಹೆಚ್ಚು-ಕಡಿಮೆ ಮೂರು ಸಾವಿರ....

ಶ್ರೀ ಹೆಚ್. ಎನ್. ನಂಜೇಗೌಡ :- 1987 ರ ನಂತರ ಏನೂ ಮಾಡಿಲ್ಲ. ಏನು ಮಾಡಿದ್ದಾರೆ ಎಂದರೆ ಸೈಟುಗಳನ್ನು ಹರಾಜು ಹಾಕುವುದು, ತಿಂದುಕೊಳ್ಳುವುದು, ಇದೊಂದು ಬಿಳಿಯಾ ಆನೆ. Why do you want it? Leave it. ಗೃಹ ಮಂಡಳಿ ಯೊಂದಿಗೆ ವಿಲೀನಗೊಳಿಸಿ. ಮತ್ತು ರಸ್ತೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಇತರೆ ಕೆಲಸಗಳನ್ನು ಬಿ.ಎಂ.ಆರ್.ಡಿ.ಎ.ಗೆ ವಹಿಸಿರುವುದರಿಂದ ಆ ಸಂಸ್ಥೆ ಆ ಕೆಲಸ ಮಾಡುವುದು ಸೂಕ್ತವೆಂಬುದನ್ನು ಹೇಳಿ, ನಾನು ಹೆಚ್ಚು ಕಾಲಾವಕಾಶ ತೆಗೆದುಕೊಳ್ಳದೆ ಇವೊತ್ತು ಏನೇನು ಸಲಹೆಗಳನ್ನು ಕೊಟ್ಟಿದ್ದೇನೆ, ಸೆಕ್ರಟೇರಿಯೇಟ್, ಸರ್ವೀಸ್ ಮತ್ತು ಅಡ್ಮಿನಿಸ್ಟ್ರೇಶನ್ ಇವುಕ್ಕೆ ಸೀಮಿತವಾಗಿ ಮಾತನಾಡಿದ್ದೇನೆ. ಉಳಿದಿರುವ ಬೇಡಿಕೆಗಳಲ್ಲಿ ಗೃಹ ಇಲಾಖೆಗೆ ಸಂಬಂಧಿಸಿದಂತೆ ಮಾತನಾಡಬಹುದಿತ್ತು. ಅಲ್ಲದೇ, ಸಾರಿಗೆ

ವಿಚಾರದಲ್ಲಿ ಸಿಂಧ್ಯಾರವರು ಉತ್ತರ ಕೊಡಲು ತಯಾರಾಗಿದ್ದರು. ಇನ್ನೂ ಹತ್ತೊಂಬತ್ತು ಬೇಡಿಕೆಗಳಿರುವುದರಿಂದ ನನಗೆ ಸ್ವಲ್ಪ ಆಳುಕುಂಟಾಗಿದೆ ನಾನು ಗಡಿಯಾರ ನೋಡುತ್ತಿದ್ದೇನೆ. ಏಕೆಂದರೆ, ಹೊಸದಾಗಿ ಆಯ್ಕೆಯಾಗಿ ಬಂದಿರುವ ಸದಸ್ಯರುಗಳಿಗೆ ಇದುವರೆವಿಗೂ ಬೇಡಿಕೆ ಬಗ್ಗೆ ಮಾತನಾಡಲು ಅವಕಾಶ ಸಿಕ್ಕಿಲ್ಲದಿರುವುದರಿಂದ ತಾವು ಅತುರದಿಂದ ಬೇಡಿಕೆಗಳನ್ನು ಗಿಲೋಟಿನ್‌ಗೆ ಹಾಕದೆ ಬೇಡಿಕೆಗಳ ಬಗ್ಗೆ ಹೆಚ್ಚಿಗೆ ಹತ್ತು ಜನ ಸದಸ್ಯರುಗಳು ಮಾತನಾಡಿದರೂ ಪರವಾಗಿಲ್ಲ, ಎಲ್ಲಾ ಸದಸ್ಯರುಗಳಿಗೂ ಸಮಾಧಾನವಾಗುವ ರೀತಿಯಲ್ಲಿ ಚರ್ಚೆಯಾಗಬೇಕು. ಏಕೆಂದರೆ ಬೇಡಿಕೆಗಳ ಮೇಲೆ ಚರ್ಚೆ ಮಾಡುವುದು ಬಹಳ ಮುಖ್ಯವಾದುದರಿಂದ ಅದನ್ನು ಮಾಡಬೇಕೆಂದು ನನ್ನ ಅನಿಸಿಕೆಯನ್ನು ತಮ್ಮ ಮುಂದಿಟ್ಟು ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಈ ಹಂತದಲ್ಲಿ ಬೇಡಿಕೆಗಳ ಮೇಲೆ ಚರ್ಚಿಸಲು ಮಾನ್ಯ ಸದಸ್ಯರಾದ ಬಿ. ಬಿ. ಚಿಮ್ಮನಕಟ್ಟಿಯವರಿಗೆ ಉಪಾಧ್ಯಕ್ಷರು ಸೂಚಿಸಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಉಪಾಧ್ಯಕ್ಷರೇ, ಈಗ ಸಮಯವಾಗಿರುವುದರಿಂದ ಮಾನ್ಯ ಸದಸ್ಯರಾದ ಬಿ. ಬಿ. ಚಿಮ್ಮನಕಟ್ಟಿಯವರು ಬೇಡಿಕೆಗಳ ಬಗ್ಗೆ ಚರ್ಚೆ ಪ್ರಾರಂಭಿಸಿ ಒಂದೆರಡು ನಿಮಿಷಗಳ ಕಾಲ ಮಾತನಾಡಲಿ, ನಂತರ ತಾವು ಸದನವನ್ನು ಮಂಗಳವಾರಕ್ಕೆ ಮುಂದೂಡಿ, ಅಂದು ಇವರು ಬೇಡಿಕೆಗಳ ಮೇಲೆ ತಮ್ಮ ಚರ್ಚೆ ಮುಂದುವರೆಸಲಿ.

ಉಪಾಧ್ಯಕ್ಷರು :– ಹಾಗೆಯೇ ಆಗಬಹುದು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಮಿ) :– ಮಾನ್ಯ ಉಪಾಧ್ಯಕ್ಷರೆ, ಸದನದ ಮುಂದೆ ಈಗಾಗಲೇ ಹತ್ತೊಂಭತ್ತು ಬೇಡಿಕೆಗಳನ್ನು ಮಂಡಿಸಿದ್ದು, ಅಷ್ಟೂ ಬೇಡಿಕೆಗಳ ಮೇಲೂ ಬಹುಶಃ ಮಾತನಾಡುವುದಕ್ಕೆ ಆಗದಿದ್ದರೂ ಸಹ ಇರುವ ಸಮಯಾವಕಾಶದ ಇತಿಮಿತಿಯಲ್ಲೇ ಕೆಲವು ಬೇಡಿಕೆಗಳ ಬಗ್ಗೆ ಈ ಸಂದರ್ಭದಲ್ಲಿ ಮಾತನಾಡಬಯಸುತ್ತೇನೆ. ಇರುವ ಬೇಡಿಕೆಗಳಲ್ಲಿ ವಿಶೇಷವಾಗಿ ಪ್ರಾಥಮಿಕ ಶಿಕ್ಷಣ ಮತ್ತು ಸಾರಿಗೆ ವ್ಯವಸ್ಥೆ ಬಗ್ಗೆ ನಾವು ಮಾತನಾಡಬೇಕಾಗಿದೆ. ಈಗಾಗಲೇ ವಿರೋಧ ಪಕ್ಷದ ಸದಸ್ಯರುಗಳು ಬಹಳ ವಿವರವಾಗಿ ಅನೇಕ ಬೇಡಿಕೆಗಳ ಬಗ್ಗೆ ಮಾತನಾಡಿರುವುದರಿಂದ, ನಾನು ಎರಡು ಬೇಡಿಕೆಗಳ ಬಗ್ಗೆ ಮಾತ್ರ ಹೆಚ್ಚು ಒತ್ತುಕೊಟ್ಟು ಈ ಸಂದರ್ಭದಲ್ಲಿ ಮಾತನಾಡುತ್ತೇನೆ. ಪ್ರಾಥಮಿಕ ಶಿಕ್ಷಣದ ಬಗ್ಗೆ ಹೇಳುವುದಾದರೆ, ನಮಗೆ ಸ್ವಾತಂತ್ರ್ಯ ಸಿಗುವುದಕ್ಕಿಂತ ಮುಂಚೆ....

ಉಪಾಧ್ಯಕ್ಷರು :– ತಾವು ತಮ್ಮ ಚರ್ಚೆಯನ್ನು ಈಗ ಇಲ್ಲೀಗೇ ನಿಲ್ಲಿಸಿ ಮಂಗಳವಾರ ಮಾತನಾಡುತ್ತಾ ಚರ್ಚೆ ಮುಂದುವರೆಸಿ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ :- ನನ್ನ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸಿ ಮಂಗಳವಾರ ಮತ್ತೆ ಮುಂದುವರೆಸುತ್ತೇನೆ.

ಉಪಾಧ್ಯಕ್ಷರು :- ಈಗ ಸದನವನ್ನು ಮುಂದೂಡಿ ಪುನಃ ಮಂಗಳವಾರ ಬೆಳಿಗ್ಗೆ ಹತ್ತು ಗಂಟೆಗೆ ಸೇರುವುದು.

(ಸದನವು ಮಧ್ಯಾಹ್ನ 1 ಗಂಟೆ 55 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 30 ನೇ ಜುಲೈ 1996 ರ ಮಂಗಳವಾರದಂದು ಬೆಳಿಗ್ಗೆ 10-00 ಗಂಟೆಗೆ ಸೇರಲು ನಿಶ್ಚಯಿಸಿತು)

+ *ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ, ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.*